ಸಂಪುಟ: 13 Volume ಸಂಚಿಕೆ: 304 Issue ಪುಟಗಳು 08 Pages ಗುರುವಾರ 22 ಜನವರಿ 2026 ₹6 PRGINO.120927 (RNINO:KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇ ಬೇಕೆಂದಿಲ್ಲ ಆದರೆ ನಂಬಿಕೆ ಇದ್ದಲ್ಲ ಪ್ರೀತಿ ಇದ್ದೇ ಇರುವುದು.
–ಸಂತ ಕಬೀರ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಅಕ್ರಮ ಕಲ್ಲು ಗಣಿಗಾರಿಕೆ ಬಂದ್ ಮಾಡಿಸಿ 4
ಅಕ್ಕ ಪಡೆ ರಾಜ್ಯಾದಂತ ಗಸ್ತು ವಾಹನಗಳ ಉದ್ಘಾಟನೆ 6
ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ... 7

## ಮಹಾಸಭಾ ಅಧ್ಯಕ್ಷರಾಗಿ ಆಯ್ಕೆಯಾದ ಖಂಡ್ರೆ ಅವರಿಗೆ ಅಭಿನಂದನೆ



**ಹುಮನಾಬಾದ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಶ್ರೀ ಈಶ್ವರ ಬಿ ಖಂಡ್ರೆ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಅವರಿಗೆ ಸುಭಾಷ ಜಿ ಕಲ್ಲೂರ, ಮಾಜಿ ಶಾಸಕರು ಹಾಗೂ ಅಧ್ಯಕ್ಷರು ಬೀದರ ಸಹಕಾರ ಸಕ್ಕರೆ ಕಾರ್ಖಾನೆ ನಿ. ಹಳ್ಳಿಖೇಡ(ಸಕಾ) ಹುಮನಾಬಾದ ಅವರು ಹೃತ್ಪೂರ್ವಕ ಅಭಿನಂದನೆ ಹಾಗೂ ಶುಭಾಶಯಗಳನ್ನು ಕೋರಿದ್ದಾರೆ.

ಶ್ರೀ ಈಶ್ವರ ಬಿ ಖಂಡ್ರೆಯವರ ಅಧ್ಯಕ್ಷತೆಯಲ್ಲಿ ಮಹಾಸಭೆಯು ಇನ್ನಷ್ಟು ಬಲಿಷ್ಠವಾಗಿ, ಸಮುದಾಯದ ಹಿತಕ್ಕಾಗಿ ಪರಿಣಾಮಕಾರಿಯಾಗಿ ಮುಂದುವರೆಯಲಿದೆ ಎಂಬ ವಿಶ್ವಾಸ ಸಮುದಾಯಕ್ಕಿದೆ. ಸಧ್ಯಕ್ಕೆ ಧರ್ಮದ ಬಗ್ಗೆ ದ್ವಂದ್ವ ಹೇಳಿಕೆಗಳು ಸಮರ್ಥವಾಗಿ ನಿಭಾಯಿಸುವರೆಂದು ಆಶಿಸುತ್ತೇನೆ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಶಿವಕುಮಾರ ಶ್ರೀಗಳ ಪುಣ್ಯಸ್ಮರಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ನಡೆದಾಡುವದೇವರೆಂದೇ ಖ್ಯಾತರಾಗಿದ್ದ ಡಾ. ಶಿವಕುಮಾರ ಮಹಾಸ್ವಾಮೀಜಿ ಅವರು ಈ ನಾಡಿಗೆ ಮಾತ್ರವಲ್ಲ, ಇಡೀ ಜಗತ್ತಿಗೇ ಗುರುವಾಗಿದ್ದರು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಹಾಗೂ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾದ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾದಲ್ಲಿ ಲಿಂಗೈಕ್ಯ ಡಾ. ಶಿವಕುಮಾರ ಮಹಾಸ್ವಾಮೀಜಿ ಅವರ 7ನೇ ಪುಣ್ಯಸ್ಮರಣೆಯ ಅಂಗವಾಗಿ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾಗಿದ್ದ ಸ್ವಾಮೀಜಿ ಆಶ್ರಯ?ಅನ್ನ?ಅಕ್ಷರ ಎಂಬ ತ್ರಿವಿಧ ದಾಸೋಹದ ಮೂಲಕ ಜಾತಿ, ಧರ್ಮ, ಜನಾಂಗದ ಬೇಧವಿಲ್ಲದೆ ಬಡವರ ಪಾಲಿಗೆ ಕಾಮಧೇನು? ಕಲ್ಪವೃಕ್ಷರಾಗಿದ್ದರು ಎಂದಿದ್ದಾರೆ.



## ದಾವೋಸ್ ಉದ್ಯಮಿಗಳಿಗೆ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ದಾವೋಸ್

ಬೆಂಗಳೂರು ಭವಿಷ್ಯದ ನಗರ. ಇಲ್ಲಿನ ಹವಾಗುಣ, ಸಂಸ್ಕೃತಿ, ಮಾನವ ಸಂಪನ್ಮೂಲ ಅತ್ಯುತ್ತಮವಾಗಿದೆ. ವಿಶ್ವದ ಅನೇಕ ಕಂಪನಿಗಳು ಇಲ್ಲಿ ಕೆಲಸ ಮಾಡಿ ಬೆಳೆಯುತ್ತಿವೆ. ನೀವೆಲ್ಲರೂ ಬೆಂಗಳೂರಿಗೆ ಬನ್ನಿ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ವಿಶ್ವದ ಉದ್ಯಮಿಗಳಿಗೆ ಆಹ್ವಾನ ನೀಡಿದ್ದಾರೆ.

ದಾವೋಸ್ ನಲ್ಲಿ ನಡೆಯುತ್ತಿರುವ ವರ್ಲ್ಡ್ ಎಕನಾಮಿಕ್ ಫೋರಂ ಸಮ್ಮೇಳನದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬುಧವಾರ ಮಾತನಾಡಿ, ಬೆಂಗಳೂರಿನಲ್ಲಿ ವಿಶ್ವದ ಪ್ರತಿಷ್ಠಿತ 500 ಕಂಪನಿಗಳು ಬೆಂಗಳೂರಿನಲ್ಲಿವೆ. ಏರೋಸ್ಪೇಸ್, ಐಟಿ, ಮೆಡಿಕಲ್ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಇಲ್ಲಿನ ಮಾನವ ಸಂಪನ್ಮೂಲ ಇದೆ. ಬನ್ನಿ ಪ್ರಗತಿಗಾಗಿ ಜತೆಗೂಡಿ ಕೆಲಸ ಮಾಡುವ. ಎಲ್ಲರೂ ಒಟ್ಟಾಗಿ ಸೇರಿ ಪುರೋಭಿವೃದ್ಧಿಯತ್ತ ಸಾಗೋಣ ಎಂದಿದ್ದಾರೆ.




# ಸರ್ಕಾರ ಗೌರ್ನರ್ ಸಂಘರ್ಷ

### ಇಂದು ಜಂಟಿ ಅಧಿವೇಶನ | ಕೇಂದ್ರ ವಿರುದ್ಧದ ಭಾಷಣ ಓದಲ್ಲ: ರಾಜ್ಯಪಾಲರು, 371 ನೇ ವಿಧಿ ಪ್ರಕಾರ ನಡೆ: ಸ್ಪೀಕರ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇಂದಿನಿಂದ ವಿಧಾನಮಂಡಲದ ಉಭಯ ಸದನಗಳ ಜಂಟಿ ಅಧಿವೇಶನ ನಡೆಯಲಿದೆ. ಹಲವು ಸಮಸ್ಯೆಗಳ ಪರಿಹಾರಕ್ಕೂ ಇದು ವೇದಿಕೆಯಾಗಲಿದೆ. ಸಂಪ್ರದಾಯದಂತೆ ರಾಜ್ಯಪಾಲರು ಅಧಿವೇಶವನ್ನು ಉದ್ದೇಶಿಸಿ ಭಾಷಣ ಮಾಡಬೇಕು. ಆದರೆ ಕೇಂದ್ರದ ವಿರುದ್ಧ ಅಂಶಗಳಿದ್ದರೆ ಸರ್ಕಾರದ ಭಾಷಣ ಪ್ರತಿಯನ್ನು ಓದುವುದಿಲ್ಲ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸ್ಪಷ್ಟಪಡಿಸಿದ್ದಾರೆ. ಸಂವಿಧಾನದಂತೆ ನಡೆಯಬೇಕಾಗುತ್ತದೆ ಎಂದಿದ್ದಾರೆ ಸ್ಪೀಕರ್ ಯು.ಟಿ. ಖಾದರ್.

**ಸರ್ಕಾರಕ್ಕೆ ತಲೆ ನೋವು:** ಸಾಮಾನ್ಯವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರ ಜಾರಿ ಮಾಡಿರುವ ಯೋಜನೆಗಳು, ಇದರಿಂದ ಜನರಿಗೆ ಆಗಿರುವ ಅನುಕೂಲ ಹಾಗೂ ಭವಿಷ್ಯದ ಯೋಜನೆಗಳ ಬಗ್ಗೆ ತಿಳಿಸುವುದು ಈವರೆಗೂ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಆದರೆ ಇಲ್ಲಿ ತದ್ವಿರುದ್ಧ ಆಗಿರುವುದೇ ಸರ್ಕಾರಕ್ಕೆ ತಲೆನೋವಾಗಿ ಪರಿಣಮಿಸಿದೆ.

**ವಿವಾದಾತ್ಮಕ ಅಂಶ ಇದ್ದರೆ..:** ರಾಜ್ಯ ಸರ್ಕಾರ ಸಿದ್ದಪಡಿಸಿದ ಭಾಷಣವನ್ನು ಸಾಮಾನ್ಯವಾಗಿ ರಾಜ್ಯಪಾಲರು ಓದುವುದು ಶಿಷ್ಟಾಚಾರ. ಅದರಲ್ಲಿ ಏನಾದರೂ ಅಪ್ಪಿತಪ್ಪಿ ಕೆಲವು ವಿವಾದಾತಕ ಅಂಶಗಳಿದ್ದರೆ ಮಾತ್ರ ರಾಜ್ಯ ಕಾರ್ರದ ಮುಖ್ಯ ಕಾರ್ಯದರ್ಶಿಯವರ ಜೊತೆ ಲೋಕಭವನದ ಅಧಿಕಾರಿಗಳು ರಚಿಸಿದ ವಿವರಣೆ ಪಡೆಯುತ್ತಾರೆ.





**ಸರ್ಕಾರದ ನಡೆ ಏನು..?**

ಕಾನೂನು ಸಚಿವ ಎಚ್‌ಕೆ ಪಾಟೀಲ್, ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕುರಿತು ಗಂಭೀರ ಚರ್ಚೆ ಆರಂಭಿಸಿದ್ದಾರೆ. ಒಂದು ವೇಳೆ ಸಂಪ್ರದಾದಂತೆ ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದುತ್ತಾರೆ. ಆದರೆ ಇಲ್ಲಿ ವಿಷಯ ಬೇರೆ ಇರುವುದರಿಂದ ರಾಜ್ಯಪಾಲರು ಭಾಷಣ ಓದಲ್ಲ ಎಂದಿರುವುದು ಸರ್ಕಾರಕ್ಕೆ ಬಿಸಿತುಪ್ಪವಾಗಿದೆ. ಕಾನೂನು ಪ್ರಕಾರ ಏನು ಮಾಡಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡಲಾಗುತ್ತಿದೆ.

ಜನವರಿ 22ರಿಂದ 31ರವರೆಗೆ ಬೆಂಗಳೂರಿನಲ್ಲಿ ಜಂಟಿ ಅಧಿವೇಶನ ನಡೆಯಲಿದೆ. ಈ ಅಧಿವೇಶನದಲ್ಲಿ MNREGA ಕುರಿತ ವಿಶೇಷ ಚರ್ಚೆ ನಡೆಯಲಿದೆ. ಅದೇ ವೇಳೆ ರಾಜ್ಯಪಾಲರ ಭಾಷಣದ ಕುರಿತು ಚರ್ಚೆ ನಡೆಸಿ, ಅಧಿವೇಶನದ ಬಳಿಕ ಆಯವ್ಯಯದ ಸಿದ್ಧತೆ ಪ್ರಾರಂಭಿಸಲಾಗುವುದು. ವರಿಷ್ಠರು ಕರೆ ನೀಡಿದರೆ ನವದೆಹಲಿಗೆ ತೆರಳುವೆ
–ಸಿದ್ದರಾಮಯ್ಯ, ಮುಖ್ಯಮಂತ್ರಿ

**ಗೌರ್ನರ್ ಮೇಲೆ ಒತ್ತಡ ಹೇರಂಗಿಲ್ಲ..!**

ನಿಯಮಗಳ ಪ್ರಕಾರ ರಾಜ್ಯಪಾಲರು ಸರ್ಕಾರದ ಭಾಷಣವನ್ನೇ ಯಥಾವತ್ತಾಗಿ ಓದಬೇಕೆಂಬ ನಿಯಮವಿಲ್ಲ. ರಾಜ್ಯಪಾಲರಿಗೆ ಯಾವುದಾದರೂ ವಿಷಯದ ಬಗ್ಗೆ ಸಂದೇಹ ಅಥವಾ ವಿವಾದಾತಕ ಅಂಶಗಳಿದ್ದರೆ ಅದನ್ನು ತೆಗೆದು ಹಾಕಲು ಸರ್ಕಾರರಕ್ಕೆ ಸೂಚನೆಯನ್ನು ಕೊಡಬಹುದು. ಇಲ್ಲದಿದ್ದರೆ ಆ ಭಾಷಣದ ಪುಟವನ್ನು ಓದಬಹುದು ಇಲ್ಲವೇ ಓದದೇ ಇರಬಹುದು. ಅದು ರಾಜ್ಯಪಾಲರ ವಿವೇಚನೆಗೆ ಬಿಟ್ಟ ತರ್ಮಾನ. ಹೀಗೆ ಓದಬೇಕೆಂದು ಅವರ ಮೇಲೆ ಒತ್ತಡ ಹೇರುವಂತಿಲ್ಲ.

**ಭಾಷಣ ಓದಲು ತಕರಾರು..?**

ಸಾಮಾನ್ಯವಾಗಿ ಯಾವುದೇ ಸರ್ಕಾರ ಇದ್ದಾಗಲೂ ಆಯಾ ಕಾಲದ ರಾಜ್ಯಪಾಲರು ಸರ್ಕಾರ ಸಿದ್ಧಪಡಿಸುವ ಭಾಷಣ ಓದುವುದು ಸಂಪ್ರದಾಯವಾಗಿದೆ. ಇದಕ್ಕೆ ಸಂವಿಧಾನದ 371ನೇ ವಿಧಿಕೂಡ ಇದಕ್ಕೆ ಪೂರಕವಾಗಿದೆ. ಆದರೆ ಸಿದ್ದರಾಮಯ್ಯ ಸರ್ಕಾರ ನರೇಗಾ ಬದಲಿಗೆ ಕೇಂದ್ರ ಜಾರಿಗೊಳಿಸಿರುವ ಜಿರಾಮ್‌ಜಿ ವಿರುದ್ಧ ಭಾಷಣದಲ್ಲಿ ಉಲ್ಲೇಖಿಸಿದ್ದೇ ರಾಜ್ಯಪಾಲರ ನಕಾರಕ್ಕೆ ಮೂಲ ಕಾರಣವಾಗಿದೆ ಎಂದು ಮೂಲಗಳು ಸ್ಪಷ್ಟಪಡಿಸಿವೆ.

## 14.38 ಕೋಟಿ ಮೌಲ್ಯದ ಆಸ್ತಿ ಪತ್ತೆ

**ಬೆಂಗಳೂರು:** ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವಿಭಾಗದ ನಿರ್ದೇಶಕ ಸರ್ದಾರ್ ಸರ್ಫರಾಜ್ ಖಾನ್ ಅವರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿದಾಗ, ಅವರು 14.38 ಕೋಟಿ ಮೌಲ್ಯದ ಆಸ್ತಿಯನ್ನು ಹೊಂದಿರುವುದು ಪತ್ತೆಯಾಗಿದೆ ಎಂದು ಕರ್ನಾಟಕ ಲೋಕಾಯುಕ್ತ ತಿಳಿಸಿದೆ.

ಲೋಕಾಯುಕ್ತ ಅಧಿಕಾರಿಗಳು 2025ರ ಡಿಸೆಂಬರ್ 24 ರಂದು ಅಕ್ರಮ ಆಸ್ತಿ (ಡಿಎ) ಗಳಿಕೆ ಪ್ರಕರಣದಲ್ಲಿ ಖಾನ್ ಅವರ ನಿವಾಸಗಳು, ಕಚೇರಿಗಳು ಮತ್ತು ಅವರ ಸಂಬಂಧಿಕರ ನಿವಾಸಗಳು ಸೇರಿದಂತೆ ಅವರಿಗೆ ಸಂಬಂಧಿಸಿದ 13 ಸ್ಥಳಗಳಲ್ಲಿ ದಾಳಿ ನಡೆಸಿದ್ದರು ಎಂದು ಪ್ರಕಟಣೆಯಲ್ಲಿ ವಿವರಿಸಿದೆ.

## ಕ್ಷಮೆ ಯಾಚಿಸಿದ ಶ್ರೀರಾಮುಲು



**ಬಳ್ಳಾರಿ:** ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಎಲ್ಲ ಕಡೆ ದಾಂಧಲೆ, ಗಾಂಜಾ ಎಗ್ಗಿಲ್ಲದೆ ನಡೆಯುತ್ತಿವೆ ಎಂದು ಬಾಲಕಿಯ ಮೇಲಿನ ಅತ್ಯಾಚಾರ ಬಗ್ಗೆ ಸಮಾವೇಶದ ವೇದಿಕೆಯಲ್ಲಿ ಪ್ರಸ್ತಾಪಿಸಿದ್ದೆ. ಬಾಲಕಿಯ ಹೆಸರು ಪ್ರಸ್ತಾಪ ಮಾಡಬಾರದಿತ್ತು. ನನ್ನ ಮಾತಿನಿಂದ ಬಾಲಕಿಯ ಕುಟುಂಬಕ್ಕೆ ನೋವು ಆಗಿದ್ದರೆ ಕ್ಷಮೆಯಾಚಿಸುತ್ತೇನೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ. ಮಾಜಿ ಸಚಿವ ಬಿ.ಶ್ರೀರಾಮುಲು ಅವರು ಮಾತನಾಡಿ, ಬ್ಯಾನರ್ ಗಲಭೆ ಪ್ರಕರಣ ಸಿಐಡಿ ಕೊಟ್ಟ ಬಳಿಕ ಸರಕಾರ ಗಂಭೀರವಾಗಿ ಪರಿಗಣಿಸಿದೆ ಎಂದು ಕೊಂಡಿದ್ದೆ. ಆದರೆ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿಲ್ಲ. ನ್ಯಾಯ ಸಿಗುವವರೆಗೆ ಹೋರಾಟ ನಡೆಸಲಾಗುವುದು ಎಂದಿದ್ದಾರೆ.

## ಅಕ್ರಮವೆಸಗಿದ್ದ ಅಧಿಕಾರಿ ಸಸ್ಪೆಂಡ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ನಿಸಾರ್ ಅಹಮ್ಮದ್, ಹಿರಿಯ ಮೋಟಾರು ವಾಹನ ನಿರೀಕ್ಷಕರು ಇವರು ಗುಜರಾತ್ ರಾಜ್ಯದ ವಾಹನಗಳಿಗೆ ನಿಯಮಬಾಹಿರವಾಗಿ ಈಊಟಿಛಿ ಅಜಡಿಣಉಜಿಛಿಚಿಣಜ ನೀಡಿದ್ದು ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ ಸಚಿವ ರಾಮಲಿಂಗಾ ರೆಡ್ಡಿ ಅವರ ಆದೇಶದ ಮೇರೆಗೆ ಅವರನ್ನು ಅಮಾನತು ಮಾಡಿ ಆಯುಕ್ತರು ಸಾರಿಗೆ ಇಲಾಖೆ ಆದೇಶ ಹೊರಡಿಸಿದ್ದಾರೆ. ಗುಜರಾತ್ ರಾಜ್ಯದ ಸಾರಿಗೆ ಕಛೇರಿಯ ಇ–ಡಿಟೆಕ್ಷನ್ ತಂಡವು ವಾಹನ ಇ–ಡಿಟೆಕ್ಷನ್ ಪೋರ್ಟಲ್ ನಲ್ಲಿ ಲಭ್ಯವಿರುವ ಡೇಟಾವನ್ನು ಪರಿಶೀಲಿಸಿ 41 ವಾಹನಗಳನ್ನು ಕರ್ನಾಟಕ ರಾಜ್ಯದ ಆರ್ ಟಿ ಒ ಕಚೇರಿಗಳಲ್ಲಿ ತಪಾಸಣೆ ಮಾಡಿ ನಮೂನೆ–38 (ಎ) ನೀಡಿದ ಬಳಿಕ ಅದೇ ದಿನ ಗುಜರಾತ್ ರಾಜ್ಯದಲ್ಲಿರುವ ಟೋಲ್ ಪ್ಲಾಜಾಗಳ ಮೂಲಕ ಸದರಿ ವಾಹನಗಳು ಹಾದುಹೋಗಿವೆ, ಅವುಗಳನ್ನು ನಿಸಾರ್ ಅಹಮದ್ ಇವರು ಅನುಮೋದಿಸಿದ್ದಾಗಿ ಗುಜರಾತ್ ಸಾರಿಗೆ ಅಧಿಕಾರಿಗಳು ತಿಳಿಸಿದ್ದರಿಂದ ವರದಿ ತರಿಸಿಕೊಂಡ ಸಚಿವರು, ಅಧಿಕಾರಿ ವಿರುದ್ಧ ಕ್ರಮ ಕೈಗೊಂಡಿದ್ದಾರೆ.

## ವಿಶೇಷ ರೈಲು ಸೇವೆಗೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮಕರ ಸಂಕ್ರಾಂತಿ, ಮೈಲಾಪುರ ಜಾತ್ರೆ ಮುಗಿಸಿ ಮತ್ತೆ ಗುಳೆ ಹೊರಟ ಜನರಿಗೆ ಫುಲ್ ಶಾಕ್ ಎದುರಾಗಿದೆ. ರೈಲ್ವೆ ರಿಸರ್ವೇಶನ್ ಟಿಕೆಟ್ ಪಡೆದ ಪ್ರಯಾಣಿಕರಿಗೆ ಅಲ್ಲೂ ಜಾಗವಿಲ್ಲದೇ ಜನರು ಜೋತಾಡಿ ಪ್ರಯಾಣಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದ ಬೆಂಗಳೂರು ಹಾಗೂ ಮಹಾರಾಷ್ಟ್ರದ ಮುಂಬೈನಂತಹ ಮಹಾ ನಗರಗಳಲ್ಲಿ ದುಡಿಮೆ ಮಾಡಿ ಜೀವನ ಸಾಗಿಸಲು ಯಾದಗಿರಿ ಜಿಲ್ಲೆಯಿಂದ ಅಪಾರ ಸಂಖ್ಯೆಯ ಕೂಲಿ ಕಾರ್ಮಿಕರು ವಲಸೆ ಹೋಗುತ್ತಿರುವುದರಿಂದ ಯಾದಗಿರಿಯಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಪ್ರಯಾಣಿಕರ ದಟ್ಟಣೆ–ಯಾಗುತ್ತಿದೆ. ಯಾದಗಿರಿ ರೈಲು ನಿಲ್ದಾಣದಿಂದ ನಾನಾ ರೈಲುಗಳ ಮೂಲಕ ಪ್ರತಿದಿನವೂ ಸಾವಿರಾರು ಪ್ರಯಾಣಿಕರು ಪ್ರಯಾಣಿಸುತ್ತಿರುವುದರಿಂದ ಹಲವು ರೈಲುಗಳು ಯಾದಗಿರಿ ರೈಲು ನಿಲ್ದಾಣದಲ್ಲೇ ಪ್ರಯಾಣಿಕರಿಂದ ಭರ್ತಿಯಾಗುತ್ತಿವೆ. ಕಲಬುರಗಿ, ಯಾದಗಿರಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳಿಂದ ಹೆಚ್ಚಿನ ಪ್ರಯಾಣಿಕರು ರಾಜ್ಯದ ರಾಜಧಾನಿ ಬೆಂಗಳೂರಿಗೆ ಪ್ರಯಾಣ ಬೆಳೆಸುತ್ತಿರುವುದರಿಂದ ಈ ಮಾರ್ಗದಲ್ಲಿ ಸಂಚರಿಸುವ ಎಲ್ಲ ರೈಲುಗಳು ಪ್ರಯಾಣಿಕರ ದಟ್ಟಣೆ ಎದುರಿಸುತ್ತಿವೆ.

## ಅಬಕಾರಿ ಸಚಿವರಿಗೆ ಕೃಪಾಕಟಾಕ್ಷ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಅಬಕಾರಿ ಸಚಿವರನ್ನು ವಜಾ ಮಾಡದೇ ಇಟ್ಟುಕೊಂಡಿದ್ದು, ಮುಖ್ಯಮಂತ್ರಿಗಳ ಕೃಪಾಕಟಾಕ್ಷದಲ್ಲೇ ಅಬಕಾರಿ ಸಚಿವರೂ ಭ್ರಷ್ಟಾಚಾರ ನಡೆಸುತ್ತಿರುವುದು ಸ್ಪಷ್ಟವಾಗುತ್ತದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮಗಳ ಜೊತೆ ಮಾತನಾಡಿ, ಅಬಕಾರಿ ಇಲಾಖೆ ಭ್ರಷ್ಟಾಚಾರ ಒಂದು ವರ್ಷದ ಹಿಂದೆಯೇ ಜಗಜ್ಜಾಹೀರಾಗಿತ್ತು. ಆ ಸಂದರ್ಭದಲ್ಲಿ ತೇಪೆ ಹಾಕುವ ಕೆಲಸ ಮಾಡಿದ್ದರು. ಅವತ್ತೇ ಮಂತ್ರಿಯನ್ನು ವಜಾ ಮಾಡಬೇಕಿತ್ತು ಎಂದು ತಿಳಿಸಿದ್ದಾರೆ.



ಈ ಸರಕಾರವೇ ಭ್ರಷ್ಟಾಚಾರದಲ್ಲಿ ತೊಡಗಿದೆ. ಎಲ್ಲ ಇಲಾಖೆಗಳಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಟೀಕಿಸಿದರು. ಯಾರು ಈ ಸರಕಾರವನ್ನು ಬೆಂಬಲಿಸಿದರೋ ಅವರೇ ಇವತ್ತು ಈ ಸರಕಾರ ಅತ್ಯಂತ ಭ್ರಷ್ಟ ಸರಕಾರ ಎಂದು ಮಾತನಾಡುತ್ತಿದ್ದಾರೆ ಎಂದು ನುಡಿದರು. ಅಂಥ ವಾತಾವರಣ ನಿರ್ಮಾಣವಾಗಿದೆ. ಗುತ್ತಿಗೆದಾರರೇ ಶೇ 60 ಕಮಿಷನ್ ಆರೋಪ ಮಾಡಿದ್ದಾರೆ ಎಂದು ಗಮನ ಸೆಳೆದಿದ್ದಾರೆ.

## ಶಾಸಕಿ ಕೆರಮ್ಮಗೆ ಬೆದರಿಕೆ: ಖಂಡನೆ



• ಮಲ್ಲಮ್ಮ ನುಡಿ ವಾರ್ತೆ ಹಾಸನ

ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದ್ಯಾವ ಸೀಮೆ ಅಹಿಂದ ನಾಯಕರು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಹಾಸನದಲ್ಲಿ ನಡೆಯಲಿರುವ ಜೆಡಿಎಸ್ ಸಮಾವೇಶದ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಅವರು ಮಾಧ್ಯಮಗಳ ಜತೆ ಮಾತನಾಡಿ,

ಕಾಂಗ್ರೆಸ್ ಪಕ್ಷದಲ್ಲಿ ಹೆಚ್ಚುತ್ತಿರುವ ಆಂತರಿಕ ಕಚ್ಚಾಟ ಕಾರಣದಿಂದ ರಾಜ್ಯದ ಅಭಿವೃದ್ಧಿ ಸೊರಗುತ್ತಿದೆ. ಕುರ್ಚಿ ಉಳಿಸಿಕೊಳ್ಳಲು ಸಿಎಂ ಸಿದ್ದರಾಮಯ್ಯ ನಾನಾ ಕಸರತ್ತುಗಳನ್ನು ನಡೆಸುತ್ತಿದ್ದಾರೆ. ಸಿಎಂ ಕುರ್ಚಿ ಬಗ್ಗೆ ಮಾತನಾಡಲು ನನಗೆ ಇಷ್ಟ ಇಲ್ಲ. ಆದರೆ, ಇಡೀ ದೇಶದಲ್ಲಿ ಇಂತಹ ಕೆಟ್ಟ ಸರ್ಕಾರ ಇನ್ನೊಂದಿಲ್ಲ ಎಂದು ಕಟುವಾಗಿ ಟೀಕಿಸಿದ್ದಾರೆ.

ಶಾಸಕಿ ಬೆದರಿಕೆ, ಸರಕಾರಕ್ಕೆ ತರಾಟೆ: ಸರ್ಕಾರ ಯಾವ ಮಟ್ಟದಲ್ಲಿ ನಡೆಯುತ್ತಿದೆ? ಎನ್ನುವುದನ್ನು ಈ ಪ್ರಕರಣವೇ ಹೇಳುತ್ತದೆ. ಕರೆಯಮ್ಮ ಅವರಿಗೆ ಬೆದರಿಕೆ ಕ್ರಮ ಖಂಡನೀಯವಾಗಿದೆ ಎಂದಿದ್ದಾರೆ.

## ವರಮಾನವೇ ಎಲ್ಲ, ಕಾಯಂ ಸಿಬ್ಬಂದಿ ಇಲ್ಲ!

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು, ವೀರೇಶ ಹೊಸಳ್ಳಿ

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಹಿರಿಯ ಉಪನೋಂದಣಿ ಕಚೇರಿಯಲ್ಲಿ ವಾರ್ಷಿಕವಾಗಿ 19 ಸಾವಿರ ರಿಂದ 21 ಸಾವಿರ ವರಿಗೆ ಅತಿ ಹೆಚ್ಚು ದಸ್ತಾವೇಜುಗಳು ನೋಂದಣಿ ಮಾಡಲಾಗುತ್ತದೆ. ಆದರೆ ಇಂತಹಾ ಕಚೇರಿಯಲ್ಲಿ ಕಾಯಂ ನೋಂದಣಿ ಅಧಿಕಾರಿಗಳು ಇಲ್ಲದೆ ಪ್ರಭಾರ ನೋಂದಣಿ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ. ಈಗಾಗಲೇ ಎರಡು ತಿಂಗಳಿನಿಂದ ಉಪ ನೋಂದಣಿ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದ ಕೊರತೆಯಿಂದ ಸಾರ್ವಜನಿಕರು ಕೆಲಸ ಸಮಯಕ್ಕೆ ಸರಿಯಾಗಿ ಕೆಲಸ ಆಗುತ್ತಿಲ್ಲ ಎಂದು ಕಚೇರಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ. ಸಿಂಧನೂರು ತಾಲೂಕಿನಲ್ಲಿ ಅಧಿಕ ಶೈಕ್ಷಣಿಕ ಸಂಸ್ಥೆಗಳು ಏಷ್ಯಾದಲ್ಲಿ ಅತಿ ಹೆಚ್ಚು ಟ್ರ್ಯಾಕ್ಟರ್ ಮಾರಾಟ ಹಾಗೂ ದೊಡ್ಡ ವಾಣಿಜ್ಯೋದ್ಯಮ ಸಂಸ್ಥೆಗಳು ನಗರವಾಗಿ ಬೆಳೆಯುತ್ತಿದೆ. ಈ ಹಿನ್ನೆಲೆಯಲ್ಲಿ ಉಪ ನೋಂದಣಿ ಕಚೆರಿಯಲ್ಲಿ ನೋಂದಣಿ ಅಧಿಕಾರಿಗಳು ಇಲ್ಲದಂತಾಗಿದೆ. ಸರ್ಕಾರ ಅಧಿಕಾರಿಗಳನ್ನು ಸಿಬ್ಬಂದಿ ವರ್ಗದವರನ್ನು ಕಾಯಂಗೊಳಿಸಬೇಕಾಗಿದೆ.

**ಈ ಹುದ್ದೆಗಳನ್ನು ಕಾಯಂ ಎಂದು..?**

ನಾಲ್ಕು ಪೋಸ್ಟ್‌ಗಳು ಇಲ್ಲದೆ ಪ್ರಭಾರ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿರುವುದು. ಉಪನೋಂದಣಿ ಅಧಿಕಾರಿ., ಪ್ರಥಮ ದರ್ಜೆ ಎರಡು ಪೋಸ್ಟ್‌ಗಳು, ದ್ವಿತೀಯ ದರ್ಜೆ ಸಹಾಯಕರು ಮೂರು, ಜವಾನ ಒಂದು ಸೇರಿದಂತೆ ಇವುಗಳ ಪೋಸ್ಟ್‌ಗಳು ಕಾಯಂ ಮಾಡಬೇಕಾಗಿದೆ.

ಸಿಂಧನೂರು ಉಪ ನೊಂದಣಿ ಕಚೇರಿ ಸಿಂಧನೂರಿನಲ್ಲಿ ವಾರ್ಷಿಕವಾಗಿ 19 ಸಾವಿರ ರಿಂದ 21 ಸಾವಿರ ದಸ್ತಾವೇಜುಗಳ ನೊಂದಣಿ ಮಾಡಲಾಗುತ್ತದೆ. 23 ಸಾವಿರರಿಂದ 26, ಸಾವಿರ ವರಿಗೆ ಋಣಭಾರ ಪ್ರಮಾಣ ಪತ್ರ ಮತ್ತು 6 ಸಾವಿರ ರಿಂದ 7 ಸಾವಿರ ವರಿಗೆ ದೃಢೀಕೃತ ನಕಲು ಹಾಗೂ ಇತರೆ ಸೇವೆಗಳನ್ನು ಪೂರೈಸಲು ಅನುಕೂಲವಾಗುತ್ತದೆ. ಸಿಂಧನೂರು
–ಉಪ ನೋಂದಣಿ ಅಧಿಕಾರಿ, ಸಿಂಧನೂರು

## ರಾಜ್ಯಪಾಲರು ಸಂಪ್ರದಾಯದಂತೆ ಭಾಷಣ ಮಾಡುವುದು ಒಳಿತು: ಸಭಾಪತಿ ಹೊರಟ್ಟಿ ಅಭಿಮತ

# ಕೀರ್ತನೆ ಹಾಗೂ ಸಂಗೀತ ದರ್ಬಾರ



• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವ ನಿಮಿತ್ಯ ಜ.20ರಿಂದ ದೇವಸ್ಥಾನದ ಪ್ರಾಂಗಣದಲ್ಲಿ ಆರಂಭಗೊಂಡ ಸಂಗೀತ ದರ್ಬಾರ ಹಾಗೂ ಕೀರ್ತನೆ ಬುಧವಾರ ಸಂಜೆ ಕೂಡ ನಡೆದವು.

ಸಂಗೀತ ದರ್ಬಾರನಲ್ಲಿ ಆಕಾಶವಾಣಿ ಖ್ಯಾತ ಸಂಗೀತಗಾರರು ಭಾಗವಹಿಸಿದರು ಅಲ್ಲದೆ, ಗದಗ ಜಿಲ್ಲೆಯ ಮಹಾಂತೇಶ್ವರ ಸ್ವಾಮಿಗಳು ಕೀರ್ತನೆ ಕಾರ್ಯಕ್ರಮ ನಡೆದವು. ಸಂಗೀತ ದರ್ಬಾರಲ್ಲಿ ಆಕಾಶವಾಣಿ ಕಲಾವಿದರಾದ ಜಗನ್ನಾಥ್ ಬೇಂದ್ರೆ, ವೀರಯ್ಯಾ ಸ್ವಾಮಿ, ಜನರ್ಧಾನ ವಾಗಮಾರೆ ಸಂಗೀತ ತಂಡ, ಗಣೇಶಸಿಂಗ್ ತಿವಾರಿ ಸೇರಿದಂತೆ ಮಕ್ಕಳುಕೂಡ ಗಾಯನ ಮಾಡುವ ಮೂಲಕ ದೇವರ ಭಕ್ತಿ ಭಾವಕ್ಕೆ ಒಳಗಾದರೂ

ಈ ಸಂದರ್ಭದಲ್ಲಿ ದೇವಸ್ಥಾನ ಸಂಗೀತ ಸಮಿತಿ ಪ್ರಮುಖರಾದ ನಾರಾಯಣರಾವ ಚಿದ್ರಿ, ಪ್ರಕಾಶ ಸುವರ್ಣಕರ್, ಶ್ರೀಶೈಲ್ ಬೇನೂರ್, ಜಯಪ್ರಜಾಶ ಉಮರ್ಗಿ, ಕಂಟೆಪ್ಪ ಹಲಬರ್ಗೆ ಸೇರಿದಂತೆ ಸಂಗೀತ ಸೇವಾ ಸಮಿತಿ ಇತರೆ ಸದಸ್ಯರು ಇದ್ದರು.



ಹುಮನಾಬಾದ:ವೀರಭದ್ರೇಶ್ವರ ದೇವರ ಅಗ್ನಿ ತುಳಿಯುವುದು ಹಾಗೂ ವೀರಭದ್ರೇಶ್ವರ ರಥೋತ್ಸವ ಬ್ರಾಹ್ಮಿ ಮುಹೂರ್ತದ ಮುಂಜಾವು 5:15ಕ್ಕೆ ನಿಗದಿತ ಸಮಯಕ್ಕೆ ನಡೆಯಲಿದೆ ಎಂದು ಹಿರೇಮಠ ಸಂಸ್ಥಾನದ ವೀರ ರೇಣುಕ ಗಂಗಧಾರ ಶಿವಾಚಾರ್ಯರು ತಿಳಿಸಿದ್ದಾರೆ.

ಜನವರಿ 25, 26ರಂದು ಪಟ್ಟಣದ ಸರದಾರ ಪಟೇಲ್ ವೃತ್ತದ ವರೆಗೆ ಮಾತ್ರ ದೇವರ ಪಲ್ಲಕ್ಕಿ ಉತ್ಸವ ಇಳಿಸಿ ಶಾಲು ಹೊದಿಸಲಾಗುವುದು ನಂತರ ನೇರವಾಗಿ ಅಗ್ನಿ ಪ್ರವೇಶ ಹಾಗೂ ರಥೋತ್ಸವಕ್ಕೆ ಪಲ್ಲಕ್ಕಿ ಉತ್ಸವ ಸಾಗಲ್ಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

# ತಹಸೀಲ್ದಾರ ಕಛೇರಿಯಲ್ಲಿ ಅಂಬಿಗರ ಚೌಡಯ್ಯ ಜಯಂತಿ



• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಪಟ್ಟಣದ ತಹಸೀಲ್ದಾರ ಕಛೇರಿ ಯಲ್ಲಿ 12ನೇ ಶತಮಾನದಲ್ಲಿ ವಚನಕಾರರಅಂಬಿಗರ ಚೌಡಯ್ಯ ಜಯಂತಿ ನಿಮಿತ್ಯ ತಹಸೀಲ್ದಾರ ಅಮಿತಕುಮಾರ ಕುಲಕರ್ಣಿ ಅವರು ಭಾವ ಚಿತ್ರ ಪೂಜೆ ಮಾಡಿ ನಮಿಸಿದ್ದರು.ನಂತರ ಮಾತನಾಡಿ, ನಿಜ ಶರಣಅಂಬಿಗರ ಚೌಡಯ್ಯ 12ನೇ ಶತಮಾನದಲ್ಲಿ ಜೀವಿಸಿದ್ಧ ಶಿವಶರಣ ಬಸವಣ್ಣ ಅವರಿಂದ ಲಿಂಗ ದೀಕ್ಷೆ ಪಡೆದು ಕಾಯಕ ಜೀವನ ಜೊತೆಗೆ ಶ್ರೇಷ್ಠ ವಚನಕಾರರಾಗಿ ಗುರುತಿಸಿ ಕೋಬದವರು.ಅಂಬಿಗರ ಚೌಡಯ್ಯ ಅವರ ವಚನ ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ವೃತ್ತಿಯಿಂದ ಅಂಬಿಗನಾಗಿದು ಸಮಾಜಕ್ಕೆ ಸರಿ ದಾರಿ ತೋರುವ ಅನೇಕ ವಚನವನ್ನು ರಚಿಸಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಗ್ರೇಡ–2 ತಹಸೀಲ್ದಾರ ರಮೇಶ ಪೆದ್ದೆ, ಪ್ರವೀಣ ಬಿರಾದಾರ, ಪ್ರಶಾಂತ, ಮಲ್ಲಪ್ಪ, ಜರಪ್ಪ, ಎಕನಾಥ, ಅಮಿತ, ಸೇರಿದಂತೆ ಅಂಬಿಗ ಸಮಾಜದ ಮುಖಂಡರು ಸಾರ್ವಜನಿಕ ಇದ್ದರು.



ಕಮಲನಗರ:ತಾಲೂಕಿನ ಸುಕ್ಷೇತ್ರ ತೋರಣಾ ಗ್ರಾಮದಲ್ಲಿ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ನಿಮಿತ್ಯ ಬುಧವಾರ ಲಕ್ಷ್ಮಣ ಶಕ್ತಿ ಕಾರ್ಯಕ್ರಮ ಪ್ರಯುಕ್ತ ಮಲ್ಲಮ್ಮ ನುಡಿ ಪತ್ರಿಕೆಯಲ್ಲಿ ಪ್ರಕಟವಾದ "ಅಖಂಡ ತೋರಣಾ ಗ್ರಾಮವನ್ನು ಒಗ್ಗೂಡಿಸಿದ ಹರಿನಾಮ ಸಪ್ತಾಹ" ಎಂಬ ಶೀರ್ಷಿಕೆಯ ವಿಶೇಷ ಲೇಖನ ಬಿಡುಗಡೆ ಮಾಡಲಾಯಿತು.ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಸುನಿಲ ಶಿಗರೆ, ಬಾಬುರಾವ ಚಾಂಡೇಶ್ವರೆ, ಮಲ್ಲಮ್ಮ ನುಡಿ ತಾಲೂಕ ವರದಿಗಾರ ಪರಮೇಶ ರಾಂಪುರೆ ಸೇರಿದಂತೆ ಗ್ರಾಮದ ಪ್ರಮುಖರು ಇದ್ದರು.

# ಅಂಬಿಗರ ಚೌಡಯ್ಯನವರಂತೆ ಮಹಾತ್ಮರ ತತ್ವಾದರ್ಶಗಳನ್ನು ಬೆಳೆಸಿಕೊಳ್ಳಿ: ಎಚ್.ಟಿ.ಪೋತೆ

• **ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ:**

ನಿಜಶರಣ ಅಂಬಿಗರ ಚೌಡಯ್ಯನವರಂತೆ ಮಹಾತ್ಮರ ತತ್ವಾದರ್ಶಗಳನ್ನು ಬೆಳೆಸಿಕೊಂಡು ಎದೆಯಲ್ಲಿ ಡಾ.ಅಂಬೇಡ್ಕರ್ ಅವರ ಸಂವಿಧಾನ ಮುಂದಿಟ್ಟುಕೊಂಡು ಶಿಕ್ಷಣ ಪಡೆದುಕೊಳ್ಳಬೇಕು ಎಂದು ಗುಲ್ಬರ್ಗಾ ವಿವಿಯ ಕನ್ನಡ ಅಧ್ಯಯನ ಸಂಸ್ಥೆ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಧ್ಯಯನ ಪೀಠದ ನಿರ್ದೇಶಕ ಎಚ್.ಟಿ.ಪೋತೆ ಅವರು ಕರೆ ನೀಡಿದರು.ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಹಾಗೂ ಕೋಲಿ ಸಮುದಾಯದ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 906 ನೆಯ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಪುಷ್ಪಾರ್ಚನೆ ಮಾಡಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದರು.

# ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ-ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ ಕಾರ್ಯಕ್ರಮ ಶಾಸಕ ಅಲ್ಲಮಪ್ರಭು ಪಾಟೀಲ್



ಕಲಬುರಗಿ,ಜನವರಿ 21(ಕರ್ನಾಟಕ ವಾರ್ತೆ): ನಗರದ ಚಂದ್ರಶೇಖರ ಪಾಟೀಲಕ್ರೀಡಾಂಗಣದಲ್ಲಿಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ದಕ್ಷಿಣ ಮತಕ್ಷೇತ್ರ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಚಾಲನೆ ನೀಡಿದರು.ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶಶೀಲ್ ಜಿ. ನಮೋಶಿ ಹಾಗೂ ಜಿಲ್ಲಾಧಿಕಾರಿ ಬಿ. ಫೌ–ಜಿಯಾ ತರನ್ನುಮ್ ಅವರು ಕ್ರೀಡಾ ಧ್ವಜಾರೋಹಣ ನೆರವೇರಿಸಿ ಬಲೂನ್ ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ಮಾಡಿದರು.

ರಾಕೇಶ ಚವ್ಹಾಣ, ಅರುಣಕುಮಾರ, ನಾಗರಾಜ, ಭೀಮರಡ್ಡಿ ಹಾಗೂ ಬಲಾನ ಗೌಡ ಅವರು ಕ್ರೀಡಾಜ್ಯೋತಿಯನ್ನು ಕ್ರೀಡಾಕೂಟದ ವೇದಿಕೆಗೆ ತಂದು ಒಪ್ಪಿಸಿದರು. ಸಂಘದ ಖಜಾಂಚಿ ಶ್ರೀಮಂತ ಪಟ್ಟೇದಾರ ಅವರು ಎಲ್ಲಾ ನೌಕರವರ್ಗದವರ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಅಧ್ಯಕ್ಷ ಬಸವರಾಜ ಬಳೂಂಡಗಿ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಜಿಲ್ಲಾಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ 2050 ಮಂದಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡಿರುವುದಾಗಿ ತಿಳಿಸಿದರು. "ಸರ್ಕಾರಿ ನೌಕರರು ಕೆಲಸದ ಒತ್ತಡದ ನಡುವೆಯೂ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ಸಂತೋಷದ ವಿಷಯ" ಎಂದು ಹೇಳಿದರು.

ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಶಿಕ್ಷಕರು ಅನೇಕ ತೊಂದರೆಗಳ ನಡುವೆಯೂ ಸಮೀಕ್ಷೆಯನ್ನುಯಶಸ್ವಿಗೊಳಿಸಿರುವುದನ್ನು ಅವರು ಶ್ಲಾಘಿಸಿದರು. "ಎರಡು ದಿನಗಳ ಕ್ರೀಡಾಕೂಟದಿಂದ ಮನಸ್ಸು ಸದೃಢವಾಗುತ್ತದೆ. ಅನೇಕರು ಖಾಲಿ ಹುದ್ದೆಗಳ ಪ್ರಭಾರದಲ್ಲಿಯೇ ಕೆಲಸ ಮಾಡುತ್ತಿದ್ದು, ಇಂತಹ ಸಂದರ್ಭದಲ್ಲಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಜಿಲ್ಲಾಧಿಕಾರಿಗಳು ಅನುಕೂಲ ಮಾಡಿಕೊಟ್ಟಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ" ಎಂದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಹೂಗಾರ ಅವರು ಅತಿಥಿಗಳನ್ನು ಸ್ವಾಗತಿಸಿದರು. ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ಆಶಾ ಹೆಗಡೆ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ವಿಭಾಗೀಯ ವೈದ್ಯಾಧಿಕಾರಿ ಡಾ. ಅಂಬರಾಯ ರುದ್ರವಾಡಿ, ಡಿಎಚ್‌ಓ ಡಾ. ಶರಣಬಸಪ್ಪ ಖ್ಯಾತನಾಳ, ಆರ್‌ಸಿಎಚ್ ಅಧಿಕಾರಿ ಸಿದ್ದು ಪಾಟೀಲ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ್ವರ, ಗೌರವ ಅಧ್ಯಕ್ಷ ಸುರೇಶ ಎಲ್. ಶರ್ಮಾ, ರಾಜ್ಯ ಪರಿಷತ್ ಸದಸ್ಯ ಧರ್ಮರಾಯ ಜವಳಿ, ಕಾರ್ಯಾಧ್ಯಕ್ಷ ಚಂದ್ರಕಾಂತ ಏರಿ, ಹಿರಿಯ ಉಪಾಧ್ಯಕ್ಷ ಎಂ.ಬಿ. ಪಾಟೀಲ, ಸುರೇಶ ವಗ್ಗೆ, ರಾಜ್ಯ ಸಂಘಟನಾಕಾರ್ಯದರ್ಶಿ ಶಿವಶಂಕರಯ್ಯ ಮಠಪತಿ, ಸಿದ್ಧಲಿಂಗಯ್ಯ ಮಠಪತಿ, ವಿಭಾಗೀಯ ಉಪಾಧ್ಯಕ್ಷ ನಿಜಲಿಂಗಪ್ಪ ಕೆ. ಕೋರಳ್ಳಿ, ವಿಭಾಗೀಯ ಉಪಾಧ್ಯಕ್ಷ ನಿಜಲಿಂಗಪ್ಪ ಮಾನ್ವಿ, ರಾಜ್ಯ ಕ್ರೀಡಾ ಕಾರ್ಯದರ್ಶಿ, ರಾಜ್ಯ ಪರಿಷತ್ ಸದಸ್ಯ ಸಂತೋಷ ಸಲಗರ, ಜಿಲ್ಲಾ ಸಂಘಟನಾಕಾರ್ಯದರ್ಶಿ ಡಿ.ಕೆ.ರಾಜರತ್ನ, ಸೇರಿದಂತೆ ವಿವಿಧ ತಾಲೂಕುಗಳ ಅಧ್ಯಕ್ಷರು, ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಜಿಲ್ಲೆಯ ಎಲ್ಲಾ ವೃಂದ ಸಂಘಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ತೋರಣಾ ಗ್ರಾಮದಲ್ಲಿ ಅದ್ದೂರಿಯಾಗಿ ನಡೆದ ಲಕ್ಷ್ಮಣ ಶಕ್ತಿ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**
**ಕಮಲನಗರ:**



ತಾಲೂಕಿನ ಸುಕ್ಷೇತ್ರ ತೋರಣಾ ಗ್ರಾಮದಲ್ಲಿ ಅಖಂಡ ಹರಿನಾಮ ಸಪ್ತಾಹ ಮತ್ತು ಜ್ಞಾನೇಶ್ವರಿ ಪಾರಾಯಣ ನಿಮಿತ್ಯ ಬುಧವಾರ ಲಕ್ಷ್ಮಣ ಶಕ್ತಿ ಕಾರ್ಯಕ್ರಮಕ್ಕೆ ಬಹಳ ಅದ್ದೂರಿ ನಡೆಯಿತು.

ಖ್ಯಾತ ಪ್ರವಚನಕಾರದ ಶ್ರೀರಾಮ ಮಹಾರಾಜ ಕುಟ್ಟೆ ಆಳಂದಿ ಅವರು ಪ್ರವಚನ ನೀಡಿದರು.ಲಕ್ಷ್ಮಣ ಶಕ್ತಿ ಎಂಬುದು ರಾಮಾಯಣದ ಯುದ್ಧಕಾಂಡದ ಒಂದು ಪ್ರಮುಖ ಘಟನೆಯನ್ನು ಸೂಚಿಸುತ್ತದೆ.

ಲಕ್ಷ್ಮಣನು ಆದಿಶೇಷನ ಅವತಾರವೆಂದು ನಂಬಲಾಗಿದೆ. ಈ ಘಟನೆಯು ಭಕ್ತ ಮತ್ತು ಭಗವಂತನ ನಡುವಿನ ಸಂಬಂಧ ಹಾಗೂ ಹನುಮಂತನ ಅಪ್ರತಿಮ ಭಕ್ತಿಯನ್ನು ಸಾರುತ್ತದೆ ಎಂದು ಹೇಳಿದರು.

ಹಾಗಾಗಿ ಎಲ್ಲರೂ ಭಕ್ತಿ ಯಿಂದ ಬದುಕಿದರೆ ಜೀವನ ದಲ್ಲಿ ಎಂತಹ ಸಂದರ್ಭ ಬಂದರು ದೇವರು ನಿಮ್ಮನ್ನು ಕೈ ಹಿಡಿಯುತ್ತಾನೆ ಎಂದು ಹೇಳಿದರು.

ಲಕ್ಷ್ಮಣ ಶಕ್ತಿ ಕಾರ್ಯಕ್ರಮ ನಂತರ, ಅನ್ನದಾಸೋಹ ಕಾರ್ಯಕ್ರಮದಲ್ಲಿ ಎಲ್ಲಾ ಸದ್ಧಭಕ್ತರಿಗೆ ಸಾಲಾಗಿ ಕುಳಿತು ಊಟ ಬಡಿಸಲಾಯಿತು. ಗ್ರಾಮದ ಪ್ರಥಮ ಪ್ರಜೆ ಗ್ರಾಪಂ ಅಧ್ಯಕ್ಷ ನಿಂದ ಕಟ್ಟಕಡೆಯ ವ್ಯಕ್ತಿ ವರಿಗೆ ಒಂದೇ ಸಾಲಿನಲ್ಲಿ ಕುಳಿತು ಊಟ ಮಾಡುವ ದ್ರಶ್ಯ ಇಡಿ ಕಾರ್ಯಕ್ರಮದ ಒಗ್ಗೂಡಿಟ್ಟು ಎತ್ತಿ ತೋರಿಸುತ್ತದೆ. ಎಲ್ಲರಿಗೂ ಊಟ ಬಡಿಸುವ ಉತ್ಸಾಹ ಮೆಚ್ಚುವಂತೆ ಇತ್ತು.

ಈ ಸಂದರ್ಭದಲ್ಲಿ ತೋರಣಾ ಗ್ರಾಮಸ್ಥರು,ಸೇರಿದಂತೆ ಸುತ್ತ ಮುತ್ತಲಿನ ಗ್ರಾಮದ ಭಕ್ತರು ನೂರಾರು ಸಂಖ್ಯೆಯಲ್ಲಿ ಸೇರಿದರು.

# ಮಕ್ಕಳನ್ನೇ ಅಸ್ತಿಯಾಗಿ ಮಾಡಿ: ಡಾ.ಶರಣಪ್ಪ ಡಗೆ



ದಿ. ಮಲಕಪ್ಪ ಜಮಾದಾರ ದ್ವಿತೀಯ ಸ್ಮರಣೋತ್ಸವ

ಕಲಬುರಗಿ: ಮಕ್ಕಳಿಗೆ ಪ್ರೀತಿ ಮಾಡಿ ಆದರೆ ಅವರನ್ನು ಮಕ್ಕಳನ್ನಾಗಿಸದೇ ಸಮಾಜದ ಆಸ್ತಿಯನ್ನಾಗಿಸಿ, ಪ್ರಮುಖವಾಗಿ ಮಕ್ಕಳಿಗೆ ಕಷ್ಟ ಏನೆಂಬುದನ್ನು ಮನವರಿಕೆ ಮಾಡಿ ಕೊಡಿಸಿ. ಕಷ್ಟ ಮನವರಿಕೆ ಮಾಡಿ ಕೊಟ್ಟರೆ ಜೀವನದಲ್ಲಿ ಕಷ್ಟ ಎದುರಾದಾಗ ನಿಭಾಯಿಸಲು ಶಕ್ತಿಹೊಂದಬೇಕೆಂದು ಕಲಬುರಗಿ ಮಹಾನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಢಗೆ ತಿಳಿ ಹೇಳಿದರು,

ಕನ್ನಡ ಭವನದಲ್ಲಿ ಜಮಾದಾರ ಕುಟುಂಬ ಪ್ರತಿಷ್ಠಾನವು ದಿ. ಮಲಕಪ್ಪ ಜಮಾದಾರ ನಿವೃತ್ತ ಪೊಲೀಸ್ ಅಧಿಕಾರಿ ದ್ವಿತೀಯ ಸ್ಮರಣೋತ್ಸವ ಅಂಗವಾಗಿ ಆಯೋಜಿಸಿದ ಬೆಸ್ಟ್ ಪೊಲೀಸ್ ಪ್ರಶಸ್ತಿ , ಪತ್ರಕರ್ತರಿಗೆ ವಿಶೇಷ ಸನ್ಮಾನ ಹಾಗೂ ಪೊಲೀಸ್ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.ಸಮಾಜದ ಎಲ್ಲ ವೃತ್ತಿಗಳು ಸಜ್ಜನರಿಂದ ಬದಾಲವಣೆ ಸಾಧ್ಯಎಂಬುದನ್ನು ಮನಗಾಣಬೇಕು. ಜನ ನೂರೆಂಟು ಎನ್ನಬಹುದು. ಪ್ರಮುಖವಾಗಿ ತಮ್ಮ ನಡೆಯು ನುಡಿಗೆ ಸಾಮ್ಯತೆ ಹೊಂದಿರಬೇಕು ಎಂದು ಪೊಲೀಸ್ ಆಯುಕ್ತರು ಹೇಳಿದರು.ನಂತರ ಮಾತನಾಡಿದ ಗುಲ್ಬರ್ಗ ವಿವಿಯ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥ ಡಾ. ಎಚ್. ಟಿ. ಪೋತೆ, ತಂದೆ ತಾಯಿಯನ್ನು ಆರಾಧಿಸುವಬದಲು ಪ್ರೀತಿ ಮಾಡಬೇಕು ಹಾಗೂ ಪ್ರೀತಿಯಿಂದ ಕಾಣಬೇಕು ಎಂದರು.ನಿಜವಾಗಿ ತಂದೆತಾಯಿಯನ್ನು ಪ್ರೀತಿ ಮಾಡದೇ ಆರಾಧಿಸದೇ ಸಾವನ್ನಪ್ಪಿದ ನಂತರ ಫೋಟೋಗೆ ಪೂಜೆ ಮಾಡಿದರೇನು? ಶಿಕ್ಷಣ ಕಲಿಸಿದ ತಂದೆತಾಯಿಯನ್ನು ಶಿಕ್ಷಣ ಪಡೆದ ನಂತರ ನಾವೇನು? ಮಾಡುತ್ತಿದ್ದೇವೆ ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸುಶಿಕ್ಷಿತರೇ ಹೆತ್ತರವನ್ನು ಬೀದಿ ಪಾಲು ಮಾಡುತ್ತಿದ್ದಾರೆ. ಇದು ಆತಂಕಕಾರಿಯಾಗಿದೆ. ನಾವು ಹೀಗೆ ಮಾಡಿದರೆ ನಮ್ಮ ಮಕ್ಕಳು ಇದನ್ನೇ ಮಾಡಬಹುದು ಎಂಬ ಪ್ರಜ್ಞೆ ಇಂದು ಎಲ್ಲರಲ್ಲಿ ಬರಲಿ ಎಂದು ಪೋತೆ ಮಾರ್ಮಿಕವಾಗಿ ನುಡಿದರು.

ಇಂದು ನಾವು ಬಹುತೇಕವಾಗಿ ನಾವಿಂದು ಹೆಂಡತಿ, ಮಕ್ಕಳಿಗೆ ಮಾತ್ರ ಸೀಮಿತವಾಗುತ್ತಿದ್ದೇವೆ. ಇದರಾಚೆ ಬಂದು ಜನ್ಮ ನೀಡಿದವರನ್ನು ಹಾಗೂ ಒಡ ಹುಟ್ಟಿದವರನ್ನು ಗೌರವಿಸುವ ಹಾಗೂ ಪ್ರೀತಿಸುವ ಕಾರ್ಯ ಮಾಡುವುದು ಅತ್ಯಗತ್ಯವಾಗಿದೆ. ಎಲ್ಲರೂ ಒಗ್ಗಟ್ಟಾಗಿದ್ದರೆ ಕುಟುಂಬ. ಹೀಗಿದ್ದ ಮೇಲೆಯೇ ಜೀವನಕ್ಕೆ ಅರ್ಥ ಎಂದು ಡಾ. ಪೋತೆ ಹೇಳಿದರು.

ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷೆ ಅನುಪಮಾ ರಮೇಶ ಕಮಕನೂರ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬುರಾವ ಯಡ್ರಾಮಿ, ಉಪಾಧ್ಯಕ್ಷ ಡಾ. ಶಿವರಂಜನ್ ಸತ್ಯಂಪೇಟೆ, ಕಸಾಪ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ಯುವ ಮುಖಂಡ ಶಿವಕುಮಾರ ಹೊನಗುಂಟಿ, ಪತ್ರಕರ್ತ ಚಂದ್ರಶೇಖರ ಕೌಲಗಾ ಸೇರಿದಂತೆ ಮುಂತಾದವರಿದ್ದರು. ಜಮಾದಾರ ಕುಟುಂಬ ಪ್ರತಿಷ್ಠಾನದ ಅಧ್ಯಕ್ಷ, ಪತ್ರಕರ್ತ ಸೂರ್ಯಕಾಂತ ಜಮಾದಾರ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ತಮ್ಮ ತಂದೆ ನಡೆನುಡಿ ಒಂದಾಗಿಸಿಕೊಂಡಿದ್ದರು. ಆದರ್ಶ ಮೌಲ್ಯಗಳನ್ನು ಕಲಿಸಿ ಉತ್ತಮ ಬದುಕು ಕಲ್ಪಿಸಿ ಕೊಟ್ಟಿದ್ದಾರೆ ಎಂದು ಸ್ಮರಿಸಿಕೊಂಡರು. ಇದೇ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಪಡೆದ ಪೊಲೀಸ್ ರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ರಮೇಶ ಜಮಾದಾರ, ಸಂಜೀವಕುಮಾರ ಕಾಂಬಳೆ, ಪಂಚಾಕ್ಷರಿ ಜಮಾದಾರ, ಶರಣಗೌಡ ಪಾಟೀಲ್, ಸುಭಾಷ ಆಲೂರ, ನಾಗಶೆಟ್ಟಿ ಡಾಕುಳಗಿ, ಪ್ರಕಾಶ ಉಡಚಣ, ಮಲ್ಲಣ್ಣ ಯಂಕಂಚಿ, ಸುರೇಶ ಲೇಂಗಟಿ ಸೇರಿದಂತೆ ಮುಂತಾದವರಿದ್ದರು.

# ವಸುದೈವ ಕುಟುಂಬಕಂ ಸಂದೇಶವೇ ಹಿಂದು ಧರ್ಮದ ಶಕ್ತಿ – ರಂಭಾಪುರಿ ಜಗದ್ಗುರುಗಳು

• **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**




ವಸುದೈವ ಕುಟುಂಬಕಂ ಎಂಬ ಮಹಾನ್ ತತ್ವದ ಮೂಲಕ ಇಡೀ ವಿಶ್ವವೇ ಒಂದು ಕುಟುಂಬ ಎಂಬ ವಿಶಾಲ ದೃಷ್ಟಿಕೋನವನ್ನು ಹಿಂದು ಧರ್ಮ ಮಾನವನಿಗೆ ನೀಡಿದ್ದು, ಇದರಿಂದ ಮಾನವೀಯತೆ, ಸಹಬಾಳ್ವೆ ಹಾಗೂ ಶಾಂತಿ ಸಮಾಜದಲ್ಲಿ ವಿಕಸನಗೊಳ್ಳುತ್ತದೆ ಎಂದು ರಂಭಾಪುರಿ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಭಾಲ್ಕಿ ತಾಲೂಕಿನ ಮೆಹಕರ ಗ್ರಾಮದಲ್ಲಿ ಹಿಂದು ಸಮ್ಮೇಳನ ಆಯೋಜನಾ ಸಮಿತಿಯಿಂದ ಭವ್ಯವಾಗಿ ಆಯೋಜಿಸಿದ್ದ ಹಿಂದು ಸಮ್ಮೇಳನದಲ್ಲಿ ದಿವ್ಯ ಸನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಸತ್ಯ, ಧರ್ಮ, ಕರ್ಮ, ಸಹಿಷ್ಣುತೆ ಮತ್ತು ಕರುಣೆ ಎಂಬ ಶಾಶ್ವತ ಮೌಲ್ಯಗಳ ಮೇಲೆ ನಿಂತಿರುವ ಹಿಂದು ಚಿಂತನೆಗಳು ಮಾನವನ ಬದುಕಿಗೆ ದಾರಿ ತೋರಿಸುವ ದೀಪಗಳಾಗಿವೆ ಎಂದು ಹೇಳಿದರು.

ಸಂಕಷ್ಟಗಳ ಮಧ್ಯೆಯೂ ಧೈರ್ಯ ಕಳೆದುಕೊಳ್ಳದೇ ಕರ್ಮದ ಮೇಲೆ ನಂಬಿಕೆ ಇಟ್ಟು ಮುಂದುವರಿಯುವ ಶಕ್ತಿಯನ್ನು ಹಿಂದು ಧರ್ಮ ನೀಡುತ್ತದೆ. "ಯದ್ಭಾವಂ ತದ್ಭವತಿ" ಎಂಬ ತತ್ವದ ಮೂಲಕ ಒಳ್ಳೆಯ ಚಿಂತನೆಗಳು ಒಳ್ಳೆಯ ಬದುಕಿಗೆ ಕಾರಣವಾಗುತ್ತವೆ ಎಂಬ ಸಂದೇಶವನ್ನು ಹಿಂದು ಧರ್ಮ ನೀಡುತ್ತದೆ ಎಂದು ತಿಳಿಸಿದರು.

ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ಕುರಿತು ನಾವು ಎಷ್ಟು ಜಾಗರೂಕರಾಗಿದ್ದೇವೆ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಕಾಲ ಬಂದಿದೆ. ನಮ್ಮ ಮಕ್ಕಳು ನಮ್ಮ ಇತಿಹಾಸ, ವೀರರು ಹಾಗೂ ಋಷಿಮುನಿಗಳನ್ನು ಎಷ್ಟು ತಿಳಿದುಕೊಂಡಿದ್ದಾರೆ ಎಂಬುದನ್ನು ಪ್ರಶ್ನಿಸಬೇಕಾಗಿದೆ. ಈಗಲೂ ಜಾಗೃತರಾಗದಿದ್ದರೆ ಭವಿಷ್ಯದಲ್ಲಿ ನಮ್ಮ ಅಸ್ತಿತ್ವಕ್ಕೆ ಅಪಾಯ ಎದುರಾಗಲಿದೆ ಎಂದು ಅವರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸನ್ನಿಧ್ಯ ವಹಿಸಿದ್ದ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿಗಳು ಆಶೀರ್ವಚನ ನೀಡಿ ಮಾತನಾಡಿ, ದೇವಾಲಯಗಳು, ಮಠ–ಮಾನ್ಯಗಳು, ಹಬ–ಹರಿದಿನಗಳು ಕೇವಲ ಆಚರಣೆಗೆ ಸೀಮಿತವಾಗದೇ ನಮ್ಮ ಸಂಸ್ಕೃತಿಯ ಶಾಲೆಗಳಾಗಬೇಕು ಎಂದು ಹೇಳಿದರು.

ಯುವಜನತೆ ದುಶ್ಚಟಗಳಿಂದ ದೂರವಿದ್ದು ರಾಷ್ಟ್ರಭಕ್ತಿ, ಧರ್ಮಭಕ್ತಿ ಮತ್ತು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಹಿಂದು ಮಹಿಳೆಯರು ನಮ್ಮ ಸಂಸ್ಕೃತಿಯ ಸ್ತಂಭಗಳಾಗಿದ್ದು, ಸೀತೆಯ ತ್ಯಾಗ, ಸಾವಿತ್ರಿಯ ಧೈರ್ಯ ಹಾಗೂ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರ ಶೌರ್ಯ ನಮ್ಮ ಹೆಮ್ಮೆಯ ಪರಂಪರೆಯಾಗಿದೆ. ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣ ಸಮಾಜದ ಮೊದಲ ಆದ್ಯತೆಯಾಗಬೇಕು ಎಂದರು.ಮಕ್ಕಳಿಗೆ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ನೀಡುವ ಜವಾಬ್ದಾರಿ ಪಾಲಕರದ್ದು ಎಂದು ತಿಳಿಸಿದರು.

ವಕ್ತಾರರಾಗಿ ಆಗಮಿಸಿದ್ದ ರಾಮಚಂದ್ರ ಎಡಕೆ ಮಾತನಾಡಿ, ಭಾರತವು ವಿಶ್ವಗುರುವಿನ ಸ್ಥಾನಕ್ಕೇರಬೇಕಾದರೆ ಹಿಂದೂ ಸಮಾಜ ಜಾಗೃತವಾಗಬೇಕು. ಧರ್ಮ ಮತ್ತು ಸಂಸ್ಕೃತಿ ಸರ್ವಶ್ರೇಷ್ಠವಾಗಲು ಸಮಾಜದ ಒಳ ಹಾಗೂ ಹೊರಗಿನ ಸಮಸ್ಯೆಗಳ ಬಗ್ಗೆ ಎಲ್ಲರೂ ಜಾಗೃತರಾಗಬೇಕಾಗಿದೆ. "ನಾವೆಲ್ಲರೂ ಒಂದು, ನಾವೆಲ್ಲರೂ ಹಿಂದೂ, ನಾವೆಲ್ಲರೂ ಬಂಧು" ಎಂಬ ಭಾವನೆಯೊಂದಿಗೆ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಮತ್ತು ನಾಗರಿಕ ಶಿಷ್ಟಾಚಾರ ಎಂಬ ಪಂಚ ಪರಿವರ್ತನೆ ಕಾರ್ಯಕ್ರಮಗಳ ಮೂಲಕ ಹಿಂದು ಸಮಾಜ ಒಗ್ಗೂಡಲು ಸಂಕಲ್ಪ ಮಾಡಬೇಕಿದೆ ಎಂದು ಹೇಳಿದರು.

ಹಿಂದು ಸಮ್ಮೇಳನದ ಪ್ರಯುಕ್ತ ಗ್ರಾಮದ ಹನುಮಾನ ಮಂದಿರದ ಬಳಿ ಗ್ರಾಮದ ಪ್ರಮುಖರು, ವಿದ್ಯಾರ್ಥಿಗಳು, ಯುವಕರು ಭಗವಾ ಶಾಲು ಧರಿಸಿ, ಕೈಯಲ್ಲಿ ಭಗವಾ ಧ್ವಜ ಹಿಡಿದು ಭಾರತ ಮಾತಾಕೀ ಜೈ, ಜೈ ಶ್ರೀರಾಮ ಘೋಷಣೆಗಳೊಂದಿಗೆ ಭವ್ಯ ಶೋಭಾಯಾತ್ರೆಯಲ್ಲಿ ಭಾಗವಹಿಸಿದರು. ಶೋಭಾಯಾತ್ರೆಯು ಗ್ರಾಮದ ಪ್ರಮುಖ ರಸ್ತೆಗಳ ಮೂಲಕ ಸಾಗಿದ್ದು, ಭಾರತ ಮಾತೆಯ ಹಾಗೂ ವಿವಿಧ ಮಹಾಪುರುಷರ ಭಾವಚಿತ್ರಗಳೊಂದಿಗೆ ಶೋಭಯಾತ್ರೆ ಪುನಃ ಹನುಮಾನ ಮಂದಿರದಲ್ಲಿ ಸಮಾಪ್ತಿಯಾಯಿತು.


ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ಉಪನಿರ್ದೇಶಕರು
ಜಂಗಲ ಕೋಯಿ ಏರಿಯ ಮನ್ನಳ್ಳಿ ರಸ್ತೆ ಬೀದರ – 585403
E-mail: ddfbidar@gmail.com Phone: 08482-236145

ಸಂಖ್ಯೆ: Notification/01/2025-26. ದಿನಾಂಕ: 21/01/2026.

ಪ್ರಕಟಣೆ

ಬೀದರ ಜಿಲ್ಲೆಯ ಮೀನುಗಾರಿಕೆ ಇಲಾಖೆ ವತಿಯಿಂದ 2025-26 ನೇ ಸಾಲಿನ ಜಿಲ್ಲಾ ಪಂಚಾಯತ ಯೋಜನೆಯಡೆ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಮತ್ತು ಮೀನು ಮಾರಾಟಕ್ಕಾಗಿ ದ್ವಿಚಕ್ರ ವಾಹನದೊಂದಿಗೆ ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಸಹಾಯಧನ ಯೋಜನೆಯಡಿ https//bidar.nic.in ವೆಬ್ ಸೈಟ್ ನ ಮುಖಾಂತರ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ-ಸಹಾಯಕ ನಿರ್ದೇಶಕರು ಬೀದರ/ ಸಂತಪೂರ/ ಬಸವಕಲ್ಯಾಣ ರವರಿಗೆ ಸಂಪರ್ಕಿಸಬಹುದು.
Mob.no. 9908316402 ಮತ್ತು 9901020772 ಸಂಪರ್ಕಿಸಬಹುದು.

ಅರ್ಜಿ ಸಲ್ಲಿಸಲು ಪ್ರಾರಂಭ ದಿ. 22.01.2026
ಅರ್ಜಿ ಸಲ್ಲಿಸಲು ಕೊನೆಯ ದಿ. 31.01.2026

ಮೀನುಗಾರಿಕೆ ಉಪನಿರ್ದೇಶಕರು,
ಬೀದರ.


Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)

# ಪ್ರವೇಶಾತಿ ಹೆಚ್ಚಳಕ್ಕೆ ಪ್ರಾಂಶುಪಾಲರಿಂದ ಜಾಗೃತಿ

• ಮಲ್ಲಮ್ಮ ನುಡಿ ವಾರ್ತೆ,ಕೆಂಭಾವಿ:

ಕರ್ನಾಟಕ ಸರ್ಕಾರ ಹಾಗೂ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಆದೇಶದ ಮೇರೆಗೆ ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೋಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2025–26 ನೇ ಸಾಲಿನ ಪದವಿ ಕೋರ್ಸುಗಳಾದ ಬಿಎ, ಬಿಕಾಂ, ಬಿಎಸ್ಸಿ ಪ್ರಥಮ ವರ್ಷದ ಪ್ರವೇಶಾತಿ ಹೆಚ್ಚಿಸುವ ನಿಟ್ಟಿನಲ್ಲಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಮಂಗಳವಾರ ಭೇಟಿ ನೀಡಿ ಜಾಗೃತಿ ಮೂಡಿಸಲಾಯಿತು.

ಪ್ರಸ್ತುತ ಸಾಲಿನಲ್ಲಿ ದ್ವಿತೀಯ ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಾಂಶುಪಾಲ ಡಾ ನಾಗಪ್ಪ ಚಾವಲ್ಕರ್ ವಿದ್ಯಾರ್ಥಿಗಳು ಪದವಿ ವ್ಯಾಸಂಗಕ್ಕಾಗಿ ಬೇರೆ ಕಡೆ ಹೋಗುವುದಕ್ಕಿಂತ ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಹಿರಿಯ ಅನುಭವಿ ಉಪನ್ಯಾಸಕರಿಂದ ಪಾಠ ಪ್ರವಚನ ನಡೆಯುತ್ತದೆ, ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು, ಎನ್ ಎಸ್ ಎಸ್, ರೆಡ್ ಕ್ರಾಸ್, ಸ್ಕೌಟ್ಸ್ & ಗೈಡ್ಸ್, ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಸುಸಜ್ಜಿತವಾದ ಗ್ರಂಥಾಲಯ, ಪ್ರಾಯೋಗಿಕ ಕೋಣೆಗಳು, ಆಟದ ಮೈದಾನ, ಪ್ರತ್ಯೇಕ ಮಹಿಳಾ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಶಿಷ್ಯ ವೇತನ, ಹೀಗೆ ಸರ್ಕಾರದಿಂದ ಸಿಗುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಉಪನ್ಯಾಸಕರಾದ ಮಲ್ಲಿಕಾರ್ಜುನ ಮರಡ್ಡಿ, ಶಶಿಕುಮಾರ ಎತ್ತಿನಮನಿ, ಶರಣಪ್ಪ ಸಾಹು, ನಸ್ರೀನ್ ತಾಜ್, ಪೂಜಾ, ಶಿವಲೀಲಾ, ಆರೀಫ್, ನಾಗಪ್ಪ, ಜಲಾಲಸಾಬ್, ಸಂಗಮೇಶ ಪಟ್ಟಣಕರ್, ಮಾಸುಮ ಅಲಿ ನಾಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಅಶೋಕ ಪಿ ತಳಕೇರಿ, ವಿರೇಂದ್ರ ಧರಿ, ರಾಮಣ್ಣ ಪಾಟೀಲ, ಬಸಣ್ಣ ಪೂಜಾರಿ, ಬೋಧಕೇತರ ಸಿಬ್ಬಂದಿ ಬಸವರಾಜ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ವಿಭಿನ್ನ ವ್ಯಕ್ತಿತ್ವ ಹೊಂದಿದ್ದ ನಿಜಶರಣ: ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ.



> ಕಾರ್ಯಕ್ರಮದಲ್ಲಿ ಎಸ್ಎಸ್ಎಲ್‌ಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಹಾಗೂ ಸಾಧನೆಗೈದವರನ್ನು ಸನ್ಮಾನಿಸಲಾಯಿತು.

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಶರಣರಲ್ಲಿ ವಿಭಿನ್ನ ವ್ಯಕ್ತಿತ್ವ ಹೊಂದಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರು ಶ್ರೇಷ್ಠ ತತ್ವಜ್ಞಾನಿಯಾಗಿ, ನಿಷ್ಠುರವಾದಿಯಾಗಿ ಸಮಾಜ ತಿದ್ದುವ ಕಾರ್ಯ ಮಾಡಿದ್ದಾರೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರು ಹೇಳಿದರು. ನಗರದ ವಿದ್ಯಾಮಂಗಲ್ ಕಾರ್ಯಾಲಯದಲ್ಲಿ ಇಂದು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ನಗರಸಭೆ ಹಾಗೂ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ, ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಶ್ರೀ ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಗೌರವ ಅರ್ಪಿಸಿ ಅವರು ಮಾತನಾಡಿದರು. ಹನ್ನೆರಡನೇ ಶತಮಾನದ ಅನುಭವ ಮಂಟಪವು ಇಂದಿನ ಭಾರತದ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಬುನಾದಿಯಾಗಿದೆ. ನಿಜಶರಣ ಅಂಬಿಗರ ಚೌಡಯ್ಯ ಹಾಗೂ ಇತರೆ ಶರಣರು ವಚನಗಳ ಮೂಲಕ ಅಂದಿನ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ತೊಡೆದುಹಾಕಲು ಶ್ರಮಿಸಿದರು ಎಂದು ಹೇಳಿದರು. ಇಂತಹ ಶರಣರ ತತ್ವ ಆದರ್ಶಗಳನ್ನು ಇಂದಿನ ಮಕ್ಕಳು ತಮ್ಮ ನಿಜಜೀವನದಲ್ಲಿ ಪರಿಪಾಲಿಸಬೇಕು. ಉತ್ತಮ ಶಿಕ್ಷಣದ ಮೂಲಕ ಜೀವನದಲ್ಲಿ ಮುಂಚೂಣಿಗೆ ಬರುವಂತೆ ಅವರು ಸಲಹೆ ನೀಡಿದರು. ರಾಜ್ಯ ಸರ್ಕಾರವು ಎಲ್ಲ ಸಮಾಜದವರಿಗೆ ಹಲವು ರೀತಿಯ ಸವಲತ್ತುಗಳನ್ನು ನೀಡುತ್ತಿದೆ. ಕೋಲಿ, ಕಬ್ಬಲಿಗ ಸಮಾಜಕ್ಕೆ ಶಕ್ತಿ ತುಂಬುವ, ಆರ್ಥಿಕವಾಗಿ ಬಲ ತುಂಬುವ ಕಾರ್ಯ ಮಾಡುತ್ತಿದ್ದು, ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ನೀವೃತ್ತ ಉಪನ್ಯಾಸಕರಾದ ಆರ್.ಎಲ್.ಸುಣಗಾರ ಅವರು ಸಮತಾವಾದಿ ಜಗಜ್ಯೋತಿ ಶ್ರೀ ಬಸವೇಶ್ವರರವರು ಕಲ್ಯಾಣ ಕ್ರಾಂತಿಗೆ ಕಾರಣಕರ್ತರು. ಇಂತಹ ಮತ್ತು ಇತರ ಶರಣರು ಕಾಯಕದ ಜೊತೆಗೆ ಜೀವನಾನುಭವವನ್ನು ತಮ್ಮ ವಚನಗಳ ಬೋಧನೆ ಮೂಲಕ

ಸಮಾಜ ತಿದ್ದುವ ಕಾರ್ಯ ಮಾಡಿದರು.ವಿಶೇಷವಾಗಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರು ವಿಭಿನ್ನ ಹಾಗೂ ವಿಶೇಷ ಶರಣರಾಗಿ , ಸ್ವಾಭಿಮಾನಿ, ನೇರವಾಗಿ ಹೇಳುವ ಶರಣರಾಗಿದ್ದರು, ಸುಮಾರು 279 ಕ್ಕೂ ಹೆಚ್ಚು ವಚನಗಳ ಮೂಲಕ ಸಮಾಜ ತಿದ್ದುವ ಕಾರ್ಯ ಮಾಡಿದ್ದಾರೆ.ಅಂತಹ ಮಹಾನ್ ಶರಣರ ಮಾರ್ಗದಲ್ಲಿ ನಮ್ಮ ಸಮುದಾಯ ನಡೆಯಬೇಕೆಂದು ಸಲಹೆ ನೀಡಿದರು. ಈ ವೇಳೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್,

ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ವಿಜಯಕುಮಾರ್ ಮಡ್ಡೆ,ಮಾಜಿ ನಗರಸಭೆ ಅಧ್ಯಕ್ಷ ಲಲಿತಾ ಅನಪುರ, ಸಮಾಜದ ಮುಖಂಡರಾದ ಆಶಪ್ಪ ಗಾಜರಕೋಟ, ನಾಗರತ್ನ ಅನಪುರ,ಬವರಾಜ ಬಾಗಲಿ, ನಿಜಶರಣ ಅಂಬಿಗರ ಚೌಡಯ್ಯ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಗೋಸಿ, ಕೋಲಿ ಸಮಾಜದ ತಾಲೂಕ ಅಧ್ಯಕ್ಷ ನಿಂಗಪ್ಪ ಜಾಲಗಾರ್, ಕೋಲಿ ಸಮಾಜದ ಯುವ ಘಟಕ ಅಧ್ಯಕ್ಷ ಮಲ್ಲು ಪೂಜಾರಿ, ಮಹೇಶ ಪೂಜಾರಿ, ಶಿವರಾಜ ಬಳಿಚಕ್ರ, ಮಲ್ಲಿಕಾಜುನ್ ಗಿರಿಮಾಸ್ಯ, ಅಯ್ಯಪ್ಪ ಹಾಲಗೇರಾ, ಬಸವರಾಜ ಪೊಲಕರ್, ಸಣ್ಣ ಹಣಮಂತ ಬಳಿಚಕ್ರ, ಸುಭಾಷ್ ಕಟಕಟಿ,

ಬಸವರಾಜ್ ಬಾಗ್ಲಿ, ಶರಣಪ್ಪ ಮೋಟ್ನಳ್ಳಿ, ಸಿ.ಎಂ.ಪಟ್ಟೆದರ್, ಬಸವರಾಜ ಅನೊರ, ಖಿಡಂಪ್ಪ ಹೊಸರ್, ವೆಂಕಟೇಶ ಸುರಪೂರ, ಭೀಮರೆಡ್ಡಿ ಯಾರಗೊಳ, ನಿಂಗಪ್ಪ, ಭೀಮರಾಯ ಕೆ.ಶಹಾಪೂರ, ಶ್ರೀನಿವಾಸ್ ಚಾಮುನಹಳ್ಳಿ, ಮುದಕಪ್ಪ ಚಾಮನಹಳ್ಳಿ, ವಿಶ್ವನಾಥ ಅಬ್ಬೆತುಮಕೊರ, ಶರಣು ಪಟ್ಟೆದರ, ಭೀಮರಾಯ ಹೀರೆನೊರ, ಮಹೇಶ ಬಾಡಿಯಾಲ್ ಮುಂತಾದವರು ಪಾಲ್ಗೊಂಡಿದ್ದರು.

# ಕ್ರೀಡೆಯಲ್ಲಿ ಗ್ರಾಮೀಣ ಪ್ರತಿಭೆ ಗುರುತಿಸುವುದು ಅವಶ್ಯ: ವಿಜಯಲಕ್ಷ್ಮಿ ಶಾಬಾದ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಯುವಜನ ಕ್ರೀಡಾ ಇಲಾಖೆ ಭಾರತ ಸರ್ಕಾರ ಮೇರಾ ಯುವ ಭಾರತ್ ಕಲಬುರ್ಗಿ / ಯಾದಗಿರಿ. ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಲ್ಬುರ್ಗಿ ಭೀಮಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆ ಯಾದಗಿರಿ ಅಮರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಯಾದಗಿರಿ ಇವರ ಸಂಯುಕ್ತಾಶ್ರಯದಲ್ಲಿ ತಾಲೂಕ ಮಟ್ಟದ ಗ್ರಾಮೀಣ ಕ್ರೀಡಾಕೂಟ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ವಿಜಯಲಕ್ಷ್ಮಿ ಶಾಬಾದ್ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ಯರಗೋಳ ಇವರು ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರ ಇಂತಹ ಸಂಘ ಸಂಸ್ಥೆಗಳ ಮುಖಾಂತರ ಇಂಥ ಕಾರ್ಯಕ್ರಮಗಳನ್ನು ಮಾಡುವದರಿಂದ ಗ್ರಾಮೀಣಮಟ್ಟದ ಪ್ರತಿಭೆಗಳನ್ನು ಗುರುತಿಸಿ ರಾಜ್ಯ ಮತ್ತು ರಾಷ್ಟ್ರಮಟ್ಟದವರೆಗೆ ಬೆಳೆಯಲು ಸಹಕಾರಿಯಾಗುತ್ತದೆ ಎಂದು ಹೇಳಿದರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ರಾಮಲಿಂಗಪ್ಪ ಅಲಿಪುರ ಇವರು ಮಾತನಾಡಿ ನಮ್ಮ ಗ್ರಾಮದಲ್ಲಿ ಶಾಲಾ ಕಾಲೇಜಿನ ಮಕ್ಕಳಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಯವರು ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಶ್ಲಾಘನೀಯ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ಧೂಳಪ್ಪ ವಹಿಸಿಕೊಂಡಿದ್ದರು, ಮುಖ್ಯ ಅತಿಥಿಗಳಾಗಿ ಎಸ್ ಡಿ ಎಮ್ ಸಿ ಅಧ್ಯಕ್ಷ ಶ್ರೀಮತಿ ಜಯಶ್ರೀ ದೇವಣ್ಣ, ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಮುಖ್ಯಗುರು ಶ್ರೀಮತಿ ಕಲ್ಪನಾ, ಎಸ್.ಡಿ.ಎಂ.ಸಿ ಅಧ್ಯಕ್ಷ ಚನ್ನಬಸಪ್ಪ ಜೋಗಿ, ಶ್ರೀಮತಿ ಕವಿತಾ, ಪ್ರಿಯಾಂಕ, ರಾಮಲಿಂಗಪ್ಪ ಇದ್ಲಿ, ನಾಗರೆಡ್ಡಿ ಬಾನರ್, ಶಿವಬಸಪ್ಪ ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಕಪ್ಪ್ ಬಹುಮಾನ ಮತ್ತು ಪ್ರಮಾಣ ಪತ್ರ ನೀಡಲಾಯಿತು. ವಿವಿಧ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಮಾಲಾಶ್ರೀ ಬಿ ಯರಗೋಳ ಪ್ರಾರ್ಥನೆ ಗೀತೆ ಹಾಡಿದರು, ಭೀಮಾಶಂಕರ ಎಂ ಯರಗೋಳ ಕಾರ್ಯಕ್ರಮವನ್ನು ನಿರೂಪಿಸಿದರು,ಸೈಯದ್ ಖಿಮರುದ್ದೀನ್ ಕಾರ್ಯಕ್ರಮವನ್ನು ವಂದಿಸಿದ್ದರು.

# ಅಕ್ರಮ ಕಲ್ಲು ಗಣಿಗಾರಿಕೆ ಬಂದ್ ಮಾಡಿಸಿ ಇಲ್ಲದಿದ್ದರೆ ಸತ್ಯಾಗ್ರಹ: ಭೀಮು ಪೂಜಾರಿ ಎಚ್ಚರಿಕೆ



• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ.

ಯಾದಗಿರಿ ತಾಲ್ಲೂಕಿನ ಮಸ್ಕನಳ್ಳಿ, ವರ್ಕನಳ್ಳಿ,ಹಳಿಗೇರಾ ಗ್ರಾಮಗಳ ಮಧ್ಯೆ ಗುಡ್ಡಗಳಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು ಇದನ್ನು ಕೂಡಲೇ ಬಂದ್ ಮಾಡಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ಸಾಮಾಜಿಕ ಹೋರಾಟಗಾರ ಭೀಮು ಪೂಜಾರಿ ಒತ್ತಾಯಿಸಿದ್ದಾರೆ.

ಇಂದು ಮೂರು ಗ್ರಾಮಗಳ ಬಳಿಯ ಗುಡ್ಡದ ಪ್ರದೇಶದಲ್ಲಿ ಮಾಧ್ಯಮಗಳಿಗೆ ಹೇಳಿಕೆ ನೀಡಿದ ಅವರು, ಕಳೆದ ಹಲವು ವರ್ಷಗಳಿಂದ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು ಈ ಪ್ರದೇಶದ ಜನರು ಇನ್ನಿಲ್ಲದ ಸಂಕಷ್ಟಕ್ಕೆ ಈಡಾಗಿದ್ದಾರೆ. ಮನೆಗಳು ಬಿರುಕು ಬಿಟ್ಟಿವೆ. ಹೊಲದಲ್ಲಿ ಬೆಳೆದ ಬೆಳೆಗಳು ನಾಶವಾಗಿವೆ ಎಂದು ಅವರು ದೂರಿದರು.ಈ ಗ್ರಾಮಗಳ ಜನತೆ ಹಲವು ಬಾರಿ ದೂರು ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಅಕ್ರಮ ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದ್ದು, ಜನ ಸಂಕಷ್ಟದಲ್ಲಿ ದಿನ ದೂಡುತ್ತಿದ್ದಾರೆ.

> ಜಿಲ್ಲಾಡಳಿತ ಕೂಡಲೇ ಕ್ರಮ ಕೈಗೊಂಡು ಅಕ್ರಮ ಗಣಿಗಾರಿಕೆ ಬಂದ್ ಮಾಡಬೇಕು ತಕ್ಷಣ ಒಂದು ವಾರದಲ್ಲಿ ಕೆಲಸ ಮಾಡದೇ ಇದ್ದರೆ ಅಕ್ರಮ ಗಣಿಗಾರಿಕೆ ಸ್ಥಳದಲ್ಲಿಯೇ ಧರಣಿ ಸತ್ಯಾಗ್ರಹ ನಡೆಸಲಾಗುವುದು.
> **ಭೀಮು ಪೂಜಾರಿ**
> ಸಾಮಾಜಿಕ ಹೋರಾಟಗಾರ
> ಯಾದಗಿರಿ.

ಈ ಪ್ರದೇಶದಲ್ಲಿ ಯಾವುದೇ ಸರ್ಕಾರಿ ಕಾಯ್ದೆ ಕಾನೂನು ಅನ್ವಯವಾಗುತ್ತಿಲ್ಲ. ಪರಿಸರ ಕಾಯ್ದೆ ಗಾಳಿಗೆ ತೂರಲಾಗಿದೆ. ಅರಣ್ಯ ಇಲಾಖೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಗೊತ್ತಿದ್ದೂ ಗೊತ್ತಿಲ್ಲದಂತೆ ಜಾಣ ಕುರುಡು ಕಿವುಡು ಅನುಸರಿಸುತ್ತಿದ್ದಾರೆ. ಇದರ ಪರಿಣಾಮ ಇಲ್ಲಿನ ಗ್ರಾಮೀಣ ಜನತೆ ಸಂಕಷ್ಟ ಎದುರಿಸುವಂತಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ಜಿಲ್ಲಾಡಳಿತ ಅಕ್ರಮ ಗಣಿಗಾರಿಕೆ ಬಂದ್ ಮಾಡಬೇಕು ಗ್ರಾಮಗಳಲ್ಲಿ ಕೃತಕವಾಗಿ ಸೃಷ್ಟಿಯಾಗಿರುವ ನರಕದ ಪರಿಸ್ಥಿತಿ ದೂರ ಮಾಡಬೇಕು ಎಂದು ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಇನ್ನೋರ್ವ ಹೋರಾಟಗಾರ ನಿಜಲಿಂಗಪ್ಪ ಪೂಜಾರಿ ಒತ್ತಾಯಿಸಿದ್ದಾರೆ.

# ಚೌಡಯ್ಯನವರ ವಚನಗಳು ಸಮಾಜಕ್ಕೆ ದಾರಿ ದೀಪ: ತಹಸೀಲ್ದಾರ್ ಮಂಗಳಾ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳು ಅವರ ತತ್ವ ಸಮಾಜಕ್ಕೆ ದಾರಿದೀಪವಾಗಿವೆ ಎಂದು ತಹಸೀಲ್ದಾರ್ ಶ್ರೀಮತಿ ಮಂಗಳಾ ಎಂ ಹೇಳಿದರು. ಪಟ್ಟಣದ ತಹಸೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳು ಸರ್ವಕಾಲಿಕ ಶ್ರೇಷ್ಠ ಮಾನವರೆಲ್ಲರೂ ನಾವೆಲ್ಲರೂ ಒಂದೇ ಎಂಬ ಸಮಾನಾವಾದ ಮನಸ್ಥಿತಿಯಲ್ಲಿ ಜೀವನ ಸಾಗಿಸಬೇಕು ಎಂದು ತಮ್ಮ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿದ್ದರು ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಈ ಕಾರ್ಯಕ್ರಮದ ಉಪನ್ಯಾಸವನ್ನು ದಲಿತ ಸಾಹಿತಿ ಹಾಗೂ ಉಪನ್ಯಾಸಕ ಡಾ.ಮರಿಯಪ್ಪ ನಾಟೇಕರ್ ನೀಡಿದರು. ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವುದರ ಜೊತೆಗೆ ಸಮಾಜದಲ್ಲಿ ತಮ್ಮ ವಚನಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸಿ ಸಮ ಸಮಾಜದ ನಿರ್ಮಾಣದ ಕನಸನ್ನು ಕಂಡಿದ್ದರು ಕೊಲಿ ಸಮಾಜದ ಬಂಧುಗಳು ಮೂಡನಂಬಿಕೆ ಮೌಢ್ಯದಿಂದ ಹೊರಬಂದು ಮಕ್ಕಳಿಗೆ ಉತ್ತಮ ಸಂಸ್ಕಾರ ಶಿಕ್ಷಣ ನೀಡಿದಾಗ ಮಾತ್ರ ಸಮಾಜದ ಬದಲಾವಣೆ ಸಾಧ್ಯ ಎಂದು ಹೇಳಿದರು. ಕೊಲಿ ಸಮಾಜದ ತಾಲೂಕು ಅಧ್ಯಕ್ಷ ಬಸವರಾಜ ಕೊಲ್ಕರ್ ರವರು ಪ್ರಾಸ್ತವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರೇಡ್ 2. ತಹಸೀಲ್ದಾರ್ ಪ್ರಕಾಶ್ ಹೊಸಮನಿ ಸಿರೇಸ್ತೆದಾರರಾದ ರಾಮನಗೌಡ ,ಸಂಗಮೇಶ್ ನಾಯಕ್, ಕಂದಾಯ ನಿರೀಕ್ಷಕ ಬಸಯ್ಯಸ್ವಾಮಿ, ಗ್ರಾಮ ಆಡಳಿತ



ಅಧಿಕಾರಿ ಸಂತೋಷ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿದ್ದಪ್ಪ ತಮ್ಮಣ್ಣೂರ, ಸಿದ್ದಣ್ಣಗೌಡ ಕಾಡಂನೂರ್, ಬಾಸುಮಿಯಾ ನಾಯ್ಕೋಡಿ, ಸಂಗುಗೌಡ ಮಾಲಿ ಪಾಟೀಲ್, ಎಪಿಎಂಸಿ ತಾಲೂಕು ಮಾಜಿ ಅಧ್ಯಕ್ಷ ಅಯ್ಯಪ್ಪ ಹಾಲಗೇರಾ, ಶಾಂತಪ್ಪ ಗೊಂದೇನೂರ, ಸೈದಣ್ಣ ಶಿವಪುರ, ಅಯ್ಯಪ್ಪ ನಾಯ್ಕೋಡಿ, ರಾಜಶೇಖರ್ ಕಲ್ಮನಿ, ಸಿದ್ದಪ್ಪ ನಾಟೇಕಾರ, ಚೌಡಯ್ಯ, ಭೀಮಣ್ಣ ,ರಾಮು ನಾಟೇಕಾರ, ದಂಡಪ್ಪ, ಮಲ್ಲು ಕಲ್ಮನಿ, ವಿಜಯ್ ಕೋಲ್ಕಾರ್ ಸಿಬ್ಬಂದಿ ವರ್ಗದವರು ಸಮಾಜದ ಮುಖಂಡರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಚೌಡಯ್ಯನವರ ವಚನಗಳು ಶ್ರೇಷ್ಠವಾಗಿವೆ: ರಾಮು ದೊರೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.



12ನೇ ಶತಮಾನದ ಅವಧಿಯಲ್ಲಿ ತಮ್ಮದೇ ಆದ ಬರವಣಿಗೆಯಲ್ಲಿ ವಚನಗಳನ್ನು ಬರೆಯುತ್ತ ಸಮಾಜದ ಅಭಿವೃದ್ಧಿಗಾಗಿ ಸಾರಿದ ಮಹಾ ಮೇಧಾವಿಗಳು ಎಂದು ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ರಾಮು ದೊರೆ ಹೇಳಿದರು. ಯಾದಗಿರಿ ತಾಲೂಕಿನ ಗೌಡಿಗೆರೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ ಹೇಳಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿನಾಮವಾದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ.

ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟು ಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟು ಹಾಕುವ ಕೌಶಲವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭವದೃಷ್ಟಿಯನ್ನು ಪ್ರಕಟಿಸಿದ್ದಾನೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯಗುರು ಪರಶುರಾಮ ಮ್ಯಾಗ್ಯರಿ, ಶಿಕ್ಷಕ ಶಿವುಕುಮಾರ ಅತಿಥಿ ರಂಗನಾಥ, ಮಲ್ಲಯ್ಯ, ಮುಖಂಡ ಡಾ.ಕಂಬಯ್ಯ ಕುಡ್ಲೂರ, ಸುಭಷ, ಮಹಾದೇವಪ್ಪ, ಶಿವು, ಶರಭಯ್ಯ ಹಾಗೊ ವಿದ್ಯಾರ್ಥಿಗಳು ಹಿರಿಯ ನಾಗರಿಕರು ಪಾಲ್ಗೊಂಡಿದ್ದರು.

# ಚೌಡಯ್ಯನ ವಚನಗಳು ಜೀವನಕ್ಕೆ ಮಾದರಿ : ಎಂ.ಪಿ ಮರೆಪ್ಪ ಕೊಯಿಲೂರು.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

12ನೇ ಶತಮಾನದಲ್ಲಿ ಸಮರತ ಅಸ್ಪೃಶ್ಯತೆ ಜೀವಂತವಾಗಿರುವುದನ್ನು ಕಂಡು ತಮ್ಮ ಕಾಯಕದ ಮೂಲಕ ವಾಣಿಗಳನ್ನು ಹೇಳುತ್ತಾ ವಚನಗಳನ್ನು ಬರೆದು ಮನುಷ್ಯನ ಜೀವನಕ್ಕೆ ಸಾಕ್ಷಿಯಾದ ಸಮಾನತೆಯ ಕ್ರಾಂತಿಕಾರಿ ವಚನಗಳನ್ನು ರಚಿಸಿ ಸಾರಿದ ಮಹಾಪುರುಷ ಎಂದು ಸಹ ಭಾವನ ಸೇವಾ ಸಂಸ್ಥೆಯ ಉಪಾಧ್ಯಕ್ಷ ಎಂ.ಪಿ ಮರೆಪ್ಪ ಕೊಯಿಲೂರು ಹೇಳಿದರು. ಯಾದಗಿರಿ ತಾಲೂಕಿನ ಕೊಯಿಲೂರು ಗ್ರಾಮದಲ್ಲಿ ನಡೆದ ನಿಜಶರಣ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ಪೂಜಿ ಸಲ್ಲಿಸಿ ಮಾತನಾಡಿದರು.

ಸಮಕಾಲಿನ ಪ್ರಪಂಚದಲ್ಲಿರುವ ಅನೇಕ ಸಮಸ್ಯೆಗಳಿಗೆ ತಮ್ಮ ಕ್ರಾಂತಿಕಾರಿಯ ವಚನದ ಮೂಲಕ ಮಾನವನ ಮನಸ್ಸನ್ನು ಬದಲಾಯಿಸುತ್ತಾ ಪ್ರತಿಯೊಬ್ಬರಲ್ಲಿ ಬದಲಾವಣೆ ಬಯಸಿದ ಅನುಭವ ಮಂಟಪದ ಸದಸ್ಯರಾದ ನಿಜಶರಣ ಅಂಬಿಗರ ಚೌಡಯ್ಯನವರ ಅಂಕಿತನಾಮಗಳೊಂದಿಗೆ ಅನೇಕ ವಚನ ಪವಾಡಗಳನ್ನು ಮಾಡುತ್ತ ಸಾರಿದ್ದಾರೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಬಸಯ್ಯಸ್ವಾಮಿ, ಶಂಕರಯ್ಯ ಸ್ವಾಮಿ, ಸಹ ಭಾವನ ಸೇವಾ ಸಂಸ್ಥೆಯ ಅಧ್ಯಕ್ಷ ಶಿವು ಬಳಿಚಕ್ರ, ಮಹೇಶ ಹೂಗಾರ, ತಿಪ್ಪಣ್ಣಗೌಡ, ಶರಣುಗೌಡ, ರೆಡ್ಡಿಗೌಡ, ಶರಣಬಸಪ್ಪ, ಸಣ್ಣ ಮಲ್ಲಯ್ಯ ಭೀಮಾರಾಯ, ಮಲ್ಲಯ್ಯ, ರಾಮಯ್ಯ, ಪಂಪಯ್ಯ, ಸಿದ್ದಪ್ಪ, ಹಣಮಂತರಾಯ ಮುಂತಾದವರು ಇದ್ದರು.

# ನಂಬಿಕೆಗೆ ನಿಜ ಶರಣ: ಗುರುತಿಸಿಕೊಂಡ ಮಹಾಪುರುಷ: ವಿಶ್ವರಾಜ ಪಾಟೀಲ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ನಗರದ ಕರವೇ ಜಿಲ್ಲಾ ಕಾರ್ಯಾಲಯದಲ್ಲಿ ವಚನಗಳ ಮೂಲಕ ಶ್ರೇಷ್ಠ ವಚನಕಾರರಾದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 906ನೇ ಜಯಂತ್ಯೋತ್ಸವದ ನಿಮಿತ್ಯ ನಿಜಶರಣರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿ ಆಚರಣೆ ಮಾಡಿ ಕರವೇ ವಿದ್ಯಾರ್ಥಿ ಘಟಕ ಜಿಲ್ಲಾಧ್ಯಕ್ಷರಾದ ವಿಶ್ವರಾಜ ಪಾಟೀಲ್ ಮಾತನಾಡಿ 12ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ವೃತಿಯಿಂದ ಅಂಬಿಗ ಪ್ರವೃತ್ತಿಯಲ್ಲಿ ಅನುಭಾವಿ ನೇರ ನಿರ್ಭಿತ ನುಡಿಗಳಿಂದ ವಚನಗಳನ್ನು ಬರೆದಿರುವುದು ಗೋಚರಿಸುತ್ತದೆ. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿನಾಮವಾದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ. ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟು ಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟು ಹಾಕುವ ಕೌಶಲವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭವದೃಷ್ಟಿಯನ್ನು ಪ್ರಕಟಿಸಿದ್ದಾನೆ ಎಂದರು,

ಹಳೆಯ ಮತ್ತು ಹೊಸ ನಂಬಿಕೆಗಳ ಅವಸ್ಥಾಂತರದ ಅವ್ಯವಸ್ಥೆಯಲ್ಲಿದ್ದ ಅಂದಿನ ಬ್ರಾಹ್ಮಣರ ವೈದಿಕೆಯ ಶ್ರೇಣಿಕೃತ ಸಮಾಜದ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸುವ ಅಂಬಿಗರ ಚೌಡಯ್ಯನವರ ಈ ವಚನಗಳು ಬಹುಶಃ ಅಂದಿನ ಸಾಮಾಜಿಕ ಆವಶ್ಯಕತೆಯ ಪರಿಣಾಮಗಳೆಂದು ನಾವು ಭಾವಿಸಬಹುದು. ಅಂಬಿಗರ ಚೌಡಯ್ಯನವರ ವಚನಗಳಿಂದ ನಮಗೆ ಕಂಡುಬರುವ ಸಮಾಜದ ಅವ್ಯವಸ್ಥೆಯ ಚಿತ್ರ, ಬೇರೆಯವರಲ್ಲಿ ನಮಗೆ ಇಷ್ಟರಮಟ್ಟಿಗೆ ಕಾಣದು. ಅವರ ವಚನಗಳಲ್ಲಿ ನಿಜಶರಣನ ಮೊರೆತದ ಜೊತೆಗೆ ಸುಧಾರಕನ ಕಟುಟೀಕೆಯೂ ಕೇಳಿಬರುತ್ತದೆಂದು ಹೇಳಿದರು. ಅವರ ವಚನಗಳು ಅನರ್ಥ ಸಾಧಕವಾದ ಕೋಪದಿಂದ ಹೊಮ್ಮಿದುವಲ್ಲ; ಸದರ್ಥ ಸಾಧಕವಾದ ಸತ್ಕೋಪದಿಂದ ಹೊಮ್ಮಿರುವುವು. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ದಿಟ್ಟತನ, ವ್ಯಗ್ರತೆ ಕಂಡುಬರುವುದು ಬಹುಶಃ ಇಬ್ಬರಲ್ಲೇ ಎಂದು ತೆ-ೀರುತ್ತದೆ. ಒಬ್ಬರು ಸಿಡಿಲು ನುಡಿಯ ಸರ್ವಜ್ಞ; ಇನ್ನೊಬ್ಬರು ಕೆಚ್ಚೆದೆಯ ವಚನಕಾರ ಅಂಬಿಗರ ಚೌಡಯ್ಯನವರು, ಇವರು ವಚನ ಸಾಹಿತ್ಯದ ಮೂಲಕ ಸಮಾಜದ ಡೊಂಕು ತಿದ್ದಿದವರು ಇಂತಹ ಕೆಚ್ಚೆದೆ-ಯ ವಚನಕಾರರನೂ ಸ್ಮರಿಸುವುದು ಮತ್ತು ಅವರ ಜೀವನ ಮೌಲ್ಯಗಳನ್ನು ಅಳವಡಿಸಕೊಳ್ಳಬೇಕೆಂದು ತಿಳಿಸದರು.

ಈ ಸಂದರ್ಭದಲ್ಲಿ ಕರವೇ ಮುಖಂಡರಾದ ಅಶೋಕನಾಯಕ, ಸಿದ್ದಪ್ಪ ಕೂಯಿಲೂರ, ಸಿದ್ದಲಿಂಗರೆಡ್ಡಿ ಮುನಗಲ್, ಮಹೇಶ ತಾಣಗುಂದಿ, ನಾಗು ತಾಂಡರೂಕರ್, ಬಸವರಾಜ ಜಗನ್ನಾಥ್, ಕಾಶಿನಾಥ ನಾನೇಕ, ನಾಗರಾಜ ಪಲ್ಲಿ, ನಾಗಪ್ಪ ನಕ್ಕಲ್, ಸಿದ್ದು ರಾಮಸಮುದ್ರ, ನಾಗು ಕಟ್ಟಿಮನಿ, ಮಂಜು ನಾಲವಾರ, ಶಿವುಕುಮಾರ ತಾಣಗುಂದಿ, ಜಟ್ಟೆಪ್ಪ ಬೆನ್ನನೋರ್, ರಮೇಶ.ಡಿ.ನಾಯಕ, ಮತ್ತು ಇತರೆ ಕಾರ್ಯಕರ್ತರು ಭಾಗಿಯಾಗಿದ್ದರು.

# ಲೋಕ ಕಲ್ಯಾಣಕ್ಕಾಗಿ ಪವಾಡದ ಮೂಲಕ ಸಾಬೀತು ಪಡಿಸಿದರು ಶ್ರೀ ನಿಜಲಿಂಗಪ್ಪ ತಾತ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಶತಮಾನದ ಹಿಂದೆ ಜನರು ಮೂಢನಂಬಿಕೆ ಮೇಲೆ ಅವಲಂಬನೆಗೊಂಡಾಗ ಅವುಗಳನ್ನ ತಮ್ಮ ಪವಾಡದ ಮೂಲಕ ಬಯಲಿಗೆಳೆದು ಲೋಕ ಕಲ್ಯಾಣ ಮಾಡಿದ ಎಂದು ಶ್ರೀ ನಿಜಲಿಂಗಪ್ಪ ತಾತ ಗುಂಡಗುರ್ತಿ ಹೇಳಿದರು.

ತಾಲೂಕಿನ ನಾಗಲಾಪುರದ ಶ್ರೀ ಹೊನ್ನಯ್ಯ ತಾತ ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ ನಡೆದ ಮೇಲೆ ಭಕ್ತರನ ಕುರಿತು ಆಶೀರ್ವಚನ ನೀಡಿದರು. ಮುಗ್ಧ ಮನಸ್ಸಿನ ಮಾನವರು ಅತ್ಯಾಕ್ಷರ ಜ್ಞಾನ ಇಲ್ಲದ ಅನಕ್ಷರಸ್ಥರಾಗಿ ಮೂಡನಂಬಿಕೆಯನ್ನು ನಂಬಿದರು ಅದನ್ನ ಅನೇಕ ಪವಾಡಗಳ ಮೂಲಕ ಸಾವಿದ್ದು ಪಡಿಸಿ ಲೋಕಕಲ್ಯಾಣ ಮಾಡಲು ಮಹಾ ತ್ಯಾಗ ಮಾಡಿದ ಶ್ರೀ ಹೊನ್ನಯ್ಯ ತಾತನವರು ಎಂದು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಯುವ ಮುಖಂಡ ಮಹೇಶರೆಡ್ಡಿಗೌಡ ಮುದ್ನಳ, ರೈತ ಸಂಘ ಜಿಲ್ಲಾ ಅಧ್ಯಕ್ಷ ಮಹಾವೀರ ಲಿಂಗೇರಿ, ಮಾಜಿ ತಾಲೂಕ ಪಂಚಾಯತಿ ಸದಸ್ಯ ಹಣಮಂತಪ್ಪ ಬಳಿಚಕ್ರ, ವಾಲ್ಮೀಕಿ ಮಹಾಸಭಾ ಯುವ ಘಟಕ ಅಧ್ಯಕ್ಷ ಶರಣು ನಾಯಕ, ರೈತ ಸೇನೆಯ ಯುವ ಘಟಕ ಜಿಲ್ಲಾಧ್ಯಕ್ಷ ತಾಯಪ್ಪ ನಾಯಕ, ಸುಭಾಷ್ ಸಹುಕಾರ ಬಳಚಕ್ರ, ಭದ್ರುಗೌಡ, ಶರಣು ಗೌಡ, ಬಸ್ಸು ಗೌಡ, ಬಾಲದಂಡಪ್ಪ, ಹಣಮಂತ ದಿಡ್ಡಿ, ಮಲ್ಲಿಕಾರ್ಜುನ, ಆಶಪ್ಪ, ದೇವಿಂದ್ರಪ್ಪ ಸಲ್ಲೆರ್, ಕಾಶಪ್ಪ ತಬ್ಬಿಕಿ ಮತ್ತು ನಾಗಲಪುರ್ ಗ್ರಾಮದ ಸುತ್ತ ಮುತ್ತಲಿನ ಗ್ರಾಮಸ್ಥರು ಭಕ್ತಾದಿಗಳು ಇದ್ದರು.

# ಕಾಮಗಾರಿ ತ್ವರಿತವಾಗಿ ಪೂರ್ಣಗೋಳಿಸಲಾಗುವುದು

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**



ನಗರದ ಹಾದು ಹೋಗುವ ರಾಷ್ಟೀಯ ಹೆದ್ದಾರಿ 275 ರ ಕಾಮಗಾರಿ ಪ್ರಗತಿಯಲ್ಲಿದ್ದು ಶಾಸಕ ಜಿಟಿ ಹರೀಶ್ ಗೌಡ ಹಾಗೂ ರಾಷ್ಟೀಯ ಹೆದ್ದಾರಿಯ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ಶ್ರೀಧರ್ ಹಾಗೂ ಹೆದ್ದಾರಿಯ ಉಪ ಇಂಜಿನಿಯರ್ ಸೈಯದ್ ತಬ್ಬಸುಮ್ ನಗರ ಸಭೆ ಆಯುಕ್ತರು ಮಾನಸ ಇಂಜಿನಿಯ ಲೋಕೇಶ್, ಸೌಮ್ಯ ಹಾಗೂ ಇನ್ನಿತರ ಅಧಿಕಾರಿಗಳು ಭೇಟಿನೀಡಿ ಪರಿಶೀಲನೆನಡೆಸಿದ್ದಾರೆ.

ನಂತರ ಸುದ್ದಿಗಾರರೊಂದಿಗೆ ಶಾಸಕ ಜಿಟಿ ಹರೀಶ್ ಗೌಡ ಮಾತನಾಡಿ– ರಾಷ್ಟೀಯ ಹೆದ್ದಾರಿ 275ಕ್ಕೆ ಸೇರಿದ ನಗರ ವ್ಯಾಪ್ತಿಯ ಎಪಿಎಂಸಿ ಬಳಿ ಇರುವ ದೇವರಾಜು ಅರಸು ಪುಥಳಿಯಿಂದ ಹಾಲಗೆರೆ ಗ್ರಾಮದ ವರೆಗೆ ರೂ.56 ಕೋಟಿ ವೆಚ್ಚದಲ್ಲಿ 5.1 ಕಿ.ಮಿ ರಸ್ತೆಯನ್ನು ನಾಲ್ಕು ಪಥ ಹಾಗೂ ಸರ್ವಿಸ್ ರಸ್ತೆ ಸೇರಿದಂತ್ತೆ 5,1 ಕಿ.ಮಿ ನಾಲ್ಕು ಪಥ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ನಗರದ ಬೈಪಾಸ್ ರಸ್ತೆಯಲಿ ನಡೆಯುತ್ತಿರುವರಸ್ತೆಕಾಮಗಾರಿಯನ್ನು ಅಧಿಕಾರಿಗಳೊಂದಿಗೆ ವಿಕ್ಷಿಸುವ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು ನಗರ ಹೊರವಲಯದಿಂದ ಹಾಲಗೆರೆ ಗ್ರಾಮದ ವರೆಗೆ ರಸ್ತೆ ವಿಸ್ತರಣೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಮನವಿಗೆ ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ರೂ.80 ಕೋಟಿ ಅಂದಾಜಿನಲ್ಲಿ ನಾಲ್ಕು ಪಥ ರಸ್ತೆ ಅಭಿವೃದ್ಧಿಗೆ 2024ರಲ್ಲಿ ಅನುಮೋದನೆ ನೀಡಿದರು. ಈ ಕಾಮಗಾರಿ ಬಗ್ಗೆ ಟೇಂಡರ್ ಪ್ರಕ್ರಿಯೆ ಮುಕ್ತಾಯಗೊಂಡು ಶೇ.40 ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂದರು.

ಮೇಲ್ಸೇತುವೆ: ರಾಷ್ಟೀಯ ಹೆದ್ದಾರಿ 275ರಲ್ಲಿ ಇತ್ತಿಚೆಗೆ ವಾಹನ ಸಂಚಾರದ ದಟ್ಟಣೆ ಹೆಚ್ಚಾಗಿದ್ದು ಹೆಚ್ಚು ಜನನಿಬಿಡ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿ 275ಕ್ಕೆಮೇಲ್ಸೇತುವೆಗಳನ್ನುನಿರ್ಮಿಸಲು ತಿರ್ಮಾನಿಸಿ ರಾಷ್ಟ್ರೀಯ ಹೆದ್ದಾರಿ 275ರನಿರ್ವಹಣ ತಂಡ ತಾಲೂಕಿನ ಬನ್ನಿಕುಪ್ಪೆ, ಎಮ್ಮೆಕೊಪ್ಪಲು, ಹಾಗೂ ಕಲ್ಲಬೆಟ್ಟತಿರುವು ಗಳನ್ನು ಗುರುತಿಸಿ ಈ ಸ್ಥಳಗಳಲ್ಲಿ ಮೆಲ್ಸೇತುವೆಗಳನ್ನು ನಿರ್ಮಿಸಲು ತಿರ್ಮಾನಿಸಲಾಗಿದೆ.

ಬನ್ನಿಕುಪ್ಪೆ ಗ್ರಾಮದಲ್ಲಿ ನಿರ್ಮಾನ ಹಂತದಲ್ಲಿದ್ದ ಮೆಲ್ಸೇತುವೆ ನಿರ್ಮಾಣ ಕಾಮಗಾರಿ ಅರ್ದಕ್ಕೆನಿಂತಿದ್ದು ಹಸಿರು ವಲಯದಿಂದ ಅನುಮೋದನೆ ಪಡೆ–ಯದೆ ಕಾಮಗಾರಿ ಪ್ರಾರಂಬಿಸಿದ ಕಾರಣ ತಡೆಯಿಡಿಯಲಾಗಿತ್ತು ಇತ್ತಿಚೆಗೆ ಪರಿಸರ ಸಂರಕ್ಷಣೆ ಸಮಿತಿ ಸಭೆ ನಡೆಸಿ ಮೇಲ್ಸೇತುವೆ ನಿರ್ಮಾಣಕ್ಕೆ ತೆರವುಗೋಳಿಸಿದ ಮರಗಳಿಗೆ ಪರ್ಯಾಯವಾಗಿ ಎರಡು ಪಟ್ಟು ಸಸಿಗಳನ್ನು ಬೆಳಸಲು ಒಪ್ಪಿದ ನಂತರ ಕಾಮಗಾರಿಗೆ ಹಸಿರು ನಿಶಾನೆ ತೋರಿಸಲಾಯಿತು. ಈ ಕಾಮಗಾರಿಗೆ ಕೇಂದ್ರ ಸರ್ಕಾರ ರೂ.13 ಕೋಟಿ ಬಿಡುಗಡೆ ಮಾಡಿದ್ದು 2027ರ ಜನವರಿಗೆ ಈ ರಸ್ತೆಯನ್ನು ಲೋಕಾರ್ಪಣೆ ಅಗಲಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶೀಕ ಅಧಿಕಾರಿ ಶ್ರೀಧರ್ ಮಾತನಾಡಿ ಮೈಸೂರಿನ ಹಿನಕಲ್ ನಿಂದ ಕುಶಾಲನಗರದ ವರೆಗೆ ನಿರ್ಮಿಸಿರುವ ರಾಷ್ಟ್ರೀಯ ಹೆದ್ದಾರಿ 275ರ ದುರಸ್ತಿ ಕಾಮಗಾರಿಗೆ ಕೇಂದ್ರ ಸರ್ಕಾರ ರೂ.40 ಕೋಟಿ ಅನುದಾನ ಬಿಡುಗಡೆ ಮಾಡಿದ್ದು ಶಿಘ್ರದಲ್ಲೇ ಟೇಂಡರ್ ಪ್ರಕ್ರಿಯೆ ಮುಗಿದ ಬಳಿಕ ದುರಸ್ತಿ ಕಾಮಗಾರಿಯನ್ನು ಪ್ರಾರಂಭಿಸಲಾಗುದು ಎಂದರು.

ಅಗತ್ಯ ಕಾಮಗಾರಿಗಳ ಮಂಜೂರು: ತಾಲೂಕು ಮತ್ತು ನಗರ ವ್ಯಾಪ್ತಿಯಲ್ಲಿ ಶಾಸಕ ಹರೀಶ್ ಗೌಡರು ಸೂಚಿಸಿರುವ ಎಲ್ಲಾ ವಿಸ್ಥೃತ ಕಾಮಗಾರಿಗಳನ್ನು ಮಂಜೂರು ಮಾಡಿಕೋಡಲಾಗುವುದು ಅಲ್ಲದೆ ವೃತ್ತಗಳು ಮತ್ತು ನೀರು ನಿಲ್ಲುವ ಕಡೆಗಳಲ್ಲಿ ವೈಜ್ಞಾನಿಕವಾಗಿ ಕಾಮಗಾರಿ ನಡೇಸಬೇಕು ಹಾಗೂ ಅಗತ್ಯ ಕಾಮಗಾರಿಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸ್ಥಳದಲ್ಲೇ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಮನ್ವಯತೆಯಿಂದ ಕೆಲಸ ಮಾಡಿ: ನಗರಸಭೆ, ಕೊಳಚೆನಿರ್ಮೂಲನೆಮತ್ತು ಒಳಚರಂಡಿ ಚರಂಡಿ ಮಡಲಿಯೊಂದಿಗೆ ಸಮನ್ವಯತೆ ಸಾದಿಸಿ ಅಗಬೇಕಿರುವ ಕಾಮಗಾರಿಗಳನ್ನು ನಡೆಸಿ ಎಂದು ನಗರಸಭಾ ಪೌರಾಯುಕ್ತರಾದ ಮಾನಸ ಮತ್ತು ಇಂಜಿನಿಯರ್ ಗೆ ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ನಗಸಬೆ ಅಯುಕ್ತೆ ಮಾನಸ, ಪರಿಸರ ಇಂಜಿನಿಯರ್ ಸೌಮ್ಯ, ಇಂಜಿನಿಯರ್ ಲೋಕೇಶ್, ಹೆದ್ದಾರಿ ಇಲಾಖೆಯ ಎಇಇ ರೂಪಾ, ಎಇ ತಬ್ಸಮ್, ವಿನಯ್, ಮಾಜಿ ಅದ್ಯಕ್ಷ ಮಾಲಿಕ್ ಪಾಷ, ಸತೀಶ್, ಸತೀಶ್ ಪಾಪಣ್ಣ, ಮುಖಂಡರು ಮತ್ತು ಸಿಬ್ಬಂದಿ ಉಪಸ್ಥಿಉತರು.

# ಯೋಗಾಭ್ಯಾಸ ಮಾಡುವುದರಿಂದ ಮಕ್ಕಳಲ್ಲಿ ಶಿಸ್ತು ಬೆಳೆಯುತ್ತದೆ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು:**



ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್( ರಿ )ಮಾನ್ವಿ ರವರ ವತಿಯಿಂದ ನಗರದ ಸರಕಾರಿ ಪ್ರೌಢಶಾಲೆ ಆವರಣದಲ್ಲಿ ಯೋಗ ಗುರು ಅನ್ನದಾನಯ್ಯ ಇವರಿಂದ ಉಚಿತ ಯೋಗ ಶಿಬಿರ ಹಾಗೂ ಯೋಗ ತರಬೇತಿಯನ್ನು ಮಕ್ಕಳಿಗೆ ನೀಡಲಾಯಿತು.

ಈ ವೇಳೆ,ಯೋಗ ಗುರು ಅನ್ನದಾನಯ್ಯರವರು ಮಾತನಾಡಿ, ಯೋಗಭ್ಯಾಸವನ್ನು ಮಾಡುವುದರಿಂದ ಮಕ್ಕಳಲ್ಲಿ ಶಿಸ್ತು ಸಂಯಮ ಜ್ಞಾಪಕ ಶಕ್ತಿ ಹೆಚ್ಚುತ್ತದೆ ಎಂದು ಯೋಗ ಗುರುಗಳಾದ ಅನ್ನದಾನಯ್ಯನವರು ಮಕ್ಕಳಿಗೆ ಹೇಳಿದರು ನಂತರ ಯೋಗಾಸನಗಳಾದ ವೃಕ್ಷಾಸನ. ಪಾದಾಸ್ತಾಸನ. ತ್ರಿಕೋನ ಆಸನ ಹಸ್ತ ಉತ್ತಾನಸನ. ಕುಳಿತು ಮಾಡುವ ಆಸನಗಳಾದ ಗೋಮುಖಾಸನ. ಉಷ್ಟಾಸನ. ಶಶಾಂಕಸನ. ಆಸನಗಳನ್ನು ಹೇಳಿಕೊಡಲಾಯಿತು. ಪ್ರಾಣಾಯಾಮಗಳನ್ನು ಅಭ್ಯಾಸಿಸಿ ಮುದ್ರೆಗಳನ್ನು ಹೇಳಿಕೊಡಲಾಯಿತು.

ಸಂದರ್ಭದಲ್ಲಿ ಶಾಲಾ ಮುಖ್ಯ ಗುರುಗಳಾದ ಮಹಾಂತೇಶ್ ಇದ್ದಲಿಗಿ. ಹಾಗೂ ಶಾಲಾ ದೈಹಿಕ ಶಿಕ್ಷಕರಾದ ಸಂಗಪ್ಪ ಅಡವಿಬಾವಿ ಗೋಪಿಚಂದ್ ಬಸವರಾಜ್ ಇನ್ನಿತರ ಶಿಕ್ಷಕರು ಭಾಗವಹಿಸಿದ್ದರು ಹಾಗೂ ಶಾಲಾ ಮಕ್ಕಳು ಯೋಗ್ಯಾಸವನ್ನು ಮಾಡಿದ ನಂತರ ತಮ್ಮ ಅನುಭವಗಳನ್ನು ಹಂಚಿಕೊಂಡರು. ಈ ವೇಳೆ, ಶಾಲೆ ಶಿಕ್ಷಕರು ಸಿಬ್ಬಂದಿ ವರ್ಗದವರು ಸೇರಿದಂತೆ ಮಕ್ಕಳು ಇದ್ದರೂ.

# ಉದ್ಯೋಗ ಮೇಳ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಹಾಗೂ 1ಎಂ1ಬಿ ಸಂಸ್ಥೆಯ ಸಹಯೋಗದಲ್ಲಿ ಜಿಲ್ಲೆಯ ತಳಕಲ್‌ನಲ್ಲಿರುವ ವಿಟಿಯು ಸ್ನಾತ–ಕೋತ್ತರ ಮತ್ತು ಕೌಶಲ್ಯಾಭಿವೃದ್ಧಿ ಕೇಂದ್ರದಲ್ಲಿ ಜನವರಿ 25 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಉದ್ಯೋಗಮೇಳವನ್ನು ಆಯೋಜಿಸಲಾಗಿದೆ.

ಉದ್ಯೋಗಮೇಳದಲ್ಲಿ 30 ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, 10ನೇ ತರಗತಿ, ಪಿಯುಸಿ, ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆದ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ಮತ್ತು ಉದ್ಯೋಗಾಕಾಂಕ್ಷಿಗಳು ಉದ್ಯೋಗಮೇಳದ ನೇರ ಸಂದರ್ಶನದಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದು. ಆಸಕ್ತರು ಜನವರಿ 23, 24 ರಂದು ಪೂರ್ವ ನೋಂದಣಿ ಮಾಡಿಕೊಳ್ಳಬಹುದು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

# ಭವಸಾಗರ ದಾಟಲು ದಾರಿತೋರಿದ ಶರಣ ಅಂಬಿಗರ ಚೌಡಯ್ಯ: ಭೀಮಣ್ಣ ಗಜಾಪುರ



• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು :**

ಕೊಟ್ಟೂರು ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಇಂದು ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯನ್ನು ಆಚರಿಸಲಾಯಿತು. ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ಚೌಡಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

12ನೇ ಶತಮಾನದಲ್ಲಿ ಬಸವಣ್ಣನವೆ ನೇತೃತ್ವದಲ್ಲಿ ಸಾಮಾಜಿಕ ಕ್ರಾಂತಿ ನಡೆಯಿತು. ನೂರಾರು ಶರಣ–ರು ತಮ್ಮ ವಚನಗಳ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದಿದರು. ಅವರಲ್ಲಿ ಅಂಬಿಗರ ಚೌಡಯ್ಯ ಸಮಾಜದಲ್ಲಿ ಕಂಡ ಅನ್ಯಾಯವನ್ನು ತಮ್ಮ ವಚನಗಳಲ್ಲಿ ಕಂಡು–ತುಂಡಾಗಿಯಾರಿಗೂ ಎದರದೇ ನೇರವಾಗಿ ಹೇಳಿದ್ದಾರೆ. ಶೋಷಣೆಯ ಪ್ರತೀಕವಾದ ದೇವಸ್ಥಾನಕ್ಕೆ ಬದಲಾಗಿ ಬಸವಣ್ಣನವರು ಇಷ್ಟಲಿಂಗವನ್ನು ನೀಡಿದರೂ. ಆದರೂ ಕೆಲವರು ಇಷ್ಟಲಿಂಗವನ್ನು ಬಿಟ್ಟು ದೇವಸ್ಥಾನಕ್ಕೆ ಹೋಗುವವರನ್ನು "ಕಟ್ಟಿದ ಲಿಂಗವ ಬಿಟ್ಟುಬೆಟ್ಟದಲಿಂಗಕ್ಕೆಹೋಗುವವರನ್ನು ಗಟ್ಟಿ ಪಾದರಕ್ಷೆಯ ತೆಗೆದುಕೊಂಡು ಲೊಟಲೊಟನೆ ಹೊಡೆ" ಎನ್ನುವ ಮಟ್ಟಕ್ಕೆ ಸಿಟ್ಟನ್ನು ತೋರಿದ್ದರು. ಕೆಳವರ್ಗದವರ ಮನೆಯಲ್ಲಿ ಉಣ್ಣಬಾರದೆಂದು ಅವರು ನೀಡುವ ಅಕ್ಕಿಬೇಳೆಯನ್ನು ಪಡೆಯುವವರನ್ನು ಸಹಾ ವಿಡಂಬನಾತ್ಮಕವಾಗಿ ಖಂಡಿಸಿದ್ದಾರೆ. ಸುಮಾರು 400ಕ್ಕೂ ಹೆಚ್ಚಿನ ವಚನಗಳನ್ನು ರಚಿಸಿದ ಇವರು ಹಾಗೂ ಮಡಿವಾಳ ಮಾಚಿದೇವ ಬಸವಣ್ಣನಿಗೆ ಬೆಂಗಾವಲಿನಂತೆ ಇದ್ದರು. ಗಂಗ ಮತಸ್ಥ ಸಮುದಾಯದಲ್ಲಿ ಸುಮಾರು 39 ಉಪಪಂಗಡಗಳಿವೆ. ಎಲ್ಲರೂ ಶಿಕ್ಷಣವಂತರಾಗುವುದರ ಜೊತೆಗೆ ಸರ್ಕಾರದ ಸೌಲಭ್ಯವನ್ನು ಪಡೆಯಲು ಸಂಘಟಿತರಾಗಬೇಕು ಎಂದರು.

ಅಧ್ಯಕ್ಷೀಯ ನುಡಿಗಳನ್ನು ಆಡಿದ ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ಬಸವಣ್ಣನವರ ಕಾಲದಲ್ಲಿದ್ದ ವಚನಕಾರರಲ್ಲಿಶ್ರೇಷ್ಠರಾಗಿದ್ದ ಅಂಬಿಗರ ಚೌಡಯ್ಯನವರ ವಚನಗಳಲ್ಲಿ ಸಾಮಾಜಿಕ ಬದಲಾವಣೆಗೆ ನಿಡಿದ ಸಂದೇಶವನ್ನು ನಾವೆಲ್ಲಾ ಪಾಲಿಸಿಕೊಂಡು ಹೋಗಬೇಕು. ಚೌಡಯ್ಯನವರು ಅಂದಿನ ವ್ಯವಸ್ಥೆಯ ವಿರುದ್ಧ ದಿಟ್ಟವಾಗಿ ಹೋರಾಡಿ ಬಂಡಾಯ ಸಾಹಿತಿಯಂತೆ ವಚನಗಳನ್ನು ರಚಿಸಿ ಪ್ರಸಿದ್ದರಾಗಿದ್ದಾರೆ. ಅವರ ವಚನಗಳು ದಾರಿ ತಪ್ಪಿದ ಸಮಾಜಕ್ಕೆ ಛಡಿ ಏಟಿನಂತಿವೆ. ನಾವೆಲ್ಲರೂ ಅವರ ಆದರ್ಶವನ್ನು ಅಳವಡಿಸಿಕೊಂಡಲ್ಲಿ ಸಮ ಸಮಾಜ ನಿರ್ಮಾಣ ವಾಗಲು ಸಾಧ್ಯ ಎಂದರು.

ಗಣೇಶ ವಕೀಲರು ಹಾಗೂ ತಾಲೂಕು ಗಂಗ ಮತ ಸಮಾಜದ ಅಧ್ಯಕ್ಷರಾದ ಗೋಣಿಬಸವರಾಜ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಂಗಮತ ಸಮಾಜ ಮುಖಂಡರಾದ ಹಾಲೇಶ್, ಪರಶುರಾಮ, ಬಿ ಹಾಲಪ್ಪ, ನಾಗರಾಜ, ಕೆಂಚಪ್ಪ, ಹ್ಯಾಳ್ಯಾ ಬಸವರಾಜ, ನರಸಿಂಗಪ್ಪ ಅರಿಸಿಕೆರೆ, ನೀಲಗಾರ ಮಂಜಪ್ಪ;, ತೂಲಹಳ್ಳಿ ಬಸವರಾಜ, ಅಂಬಳಿ ಬಸವರಾಜ ಶಿರಸ್ತೇದಾರ್ ಚಂದ್ರನಾಯ್ಕ, ಉಪತಹಶೀಲ್ದಾರ್ ಅನ್ನದಾನೇಶ ಬಿ ಪತ್ತಾರ್, ಕಂ ನಿ ಹರೀಷ ಹಾಗೂ ಇತರರು ಇದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು.

# ಉಮ್ರಾ ಯಾತ್ರೆ ಕೈಗೊಂಡ ಯಾತ್ರಾರ್ಥಿಗಳಿಗೆ ಬೀಳ್ಕೊಡುಗೆ



• **ಮಲ್ಲಮ್ಮ ನುಡಿ ವಾರ್ತೆ ಲಿಂಗಸುಗೂರು:**

ಪಟ್ಟಣದ ಆಜಾದ್ ನಗರ 18 ವಾರ್ಡ್ ನಲ್ಲಿ ಉಮ್ರಾ ಯಾತ್ರೆ ಕೈಗೊಂಡಿರುವ ಯಾತ್ರಾರ್ಥಿಗಳಿಗೆ ಪ್ರಥಮ ದರ್ಜೆ ಗುತ್ತಿಗೆದಾರರು ಕುಟುಂಬದಲ್ಲಿ 5 ಜನರು ಹೋಗುತ್ತಿದ್ದ ಮಂಗಳವಾರ ಉಮ್ರಾ ಯಾತ್ರೆ ಕೈಗೊಂಡಿರುವ ಯಾತ್ರಾರ್ಥಿಗಳಿಗೆ ಸನ್ಮಾನಿಸಿ, ಬೀಳ್ಕೊಡಲಾಯಿತು.

ಉಮ್ರಾ ಯಾತ್ರೆಗೆ ತೆರಳುವ ಯಾತ್ರಿಗಳ ಪ್ರಯಾಣ ಸುಖಕರವಾಗಿರಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಮೌಲಾಸಾಬ ಪ್ರಥಮ ದರ್ಜೆ ಗುತ್ತಿಗೆದಾರರು, ಹುಸೇನ್ ಸಾಬ್,ಅಮೀನುದ್ದೀನ್ ನೂರಿ , ರಾಜ ಮೊಹ್ಮದ್, ಆಲಂ ಪಾಷಾ, ಅಬ್ದುಲ್ ಕರೀಂ ಸಾಬ್, ಬಂದೇ ನವಾಜ್,ಖಾಜಾ ಸಾಬ,ಇಮಾಮ ಸಾಬ್ ಅಬ್ದುಲ್ ಗಫೂರ್,ಕುಟುಂಬಸ್ಥರು ಸೇರಿದಂತೆ ಉಪಸ್ಥಿತರಿದ್ದರು

# ನೇತ್ರಾಣಿ ದೇವಿ ವಾರ್ಷಿಕ ಉತ್ಸವ

**ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:**

ಬೇಲೇಕೇರಿ, ಹಾರವಾಡ, ತರಂಗಮೇಟ, ಮುದಗಾ, ಕೇಣಿ ಸಮುದ್ರದ ಮಧ್ಯದಲ್ಲಿರುವ ಕುಕ್ಕುಡ ಗುಡ್ಡದ ಮೇಲೆ ಜನವರಿ 24, ಶನಿವಾರದಂದು ಕುಕ್ಕುಡೇಶ್ವರ ಮತ್ತು ನೇತ್ರಾಣಿ ದೇವಿಯ ವಾರ್ಷಿಕ ಉತ್ಸವ ಜರುಗಲಿದೆ. ಬೆಳಿಗ್ಗೆ 9.30 ರಿಂದ ಅಭಿಷೇಕ ಮತ್ತು ಮಹಾಪೂಜೆ ನಡೆಯುವುದು. ನಂತರ ಶ್ರೀ ದೇವರಿಗೆ ಬಂದ ಫಲ–ಫಲಾವಳಿಗಳ ಸವಾಲು ಮಾಡಲಾಗುವುದು.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನ ಸಮಿತಿ ಅಧ್ಯಕ್ಷ ಗಣಪತಿ ಮಾಧವ ಬಾನಾವಳಿಕ, ಅರ್ಚಕ ಮಂಜು ಗುನಗ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಜಾಪ್ರಭುತ್ವ ನಂಬಿದರೆ ಸಮಾನತೆ ಸಾಧ್ಯ : ಬಸವರಾಜ ರಾಯರೆಡ್ಡಿ



• **ಮಲ್ಲಮ್ಮನುಡಿ ವಾರ್ತೆ ಕುಕನೂರು:**

ಇಡೀ ವಿಶ್ವಕ್ಕೆ ಮಾದರಿಯಾದ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಯಲ್ಲಿ ನನಗೆ ಅಪಾರವಾದ ನಂಬಿಕೆ ಇದೆ, ಏಕೆಂದರೆ ಇದರಿಂದ ಸಮಾಜದಲ್ಲಿ ಸಮಾನತೆ ಜೊತೆಗೆ ಸುವ್ಯವಸ್ಥೆ ಕಾಣಲು ಸಾಧ್ಯ ಎಂದು ಮುಖ್ಯ ಮಂತ್ರಿಗಳ ಆರ್ಥಿಕ ಸಲಹೆಗಾರ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಮಂಗಳವಾರ ಕೈಗೊಳ್ಳಲಾದ ಕಾಮಗಾರಿ ಉದ್ಘಾಟನೆ ವೇಳೆ ಮಸಬಹಂಚಿನಾಳ ಗ್ರಾಮದಲ್ಲಿ ನೂತನ ಪಿಯು ಕಾಲೇಜ್ ಹಾಗೂ ಪಿಠೋಪಕರಣ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ರಾಜಕಾರಣಿ ಯಾದವರು ದೂರ ದೃಷ್ಟಿ ಹೊಂದಿರಬೇಕು, ಅಭಿವೃದ್ಧಿ ಚಿಂತಕರಗಿರಬೇಕು,ಜನರನ್ನು ಪ್ರೀತಿಸುವ ಮನೋಭಾವ ಉಳ್ಳವರಾಗಿರಬೇಕು ಎಂದರು. ಇಂದಿನ ರಾಜಕಾರಣದಲ್ಲಿ ಜಾತಿ, ಧರ್ಮ, ಹಣದ ವ್ಯವಸ್ಥೆ ಅಭಿವೃದ್ಧಿಗೆ ಮಾರಕವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಇಂಥ ವ್ಯವಸ್ಥೆ ಬದಲಾಗದಿದ್ದರೆ ಮುಂಬರುವ ದಿನಗಳು ಸಮಾಜದಲ್ಲಿ ಅಶಾಂತಿ ಮತ್ತು ಅಭದ್ರತೆಗೆ ನಾಂದಿ ಯಾಗಲಿವೆ ಎಂದರು. ಯಲಬುರ್ಗಾ ಕ್ಷೇತ್ರಕ್ಕೆ ಶಾಸಕನಾಗಿ ಬಂದಾಗ ಒಂದು ರಸ್ತೆ ಕೂಡ ಇರಲಿಲ್ಲ ತಾಲೂಕಿನಲ್ಲಿ ಸುಸರ್ಜಿತವಾದ ರಸ್ತೆ ಗಳು, ನೂರಾರು ಶಾಲೆಗಳು ಹತ್ತಾರು ವಸತಿ ನಿಲಯಗಳು ಕೌಶಲ್ಯ ಅಭಿವೃದ್ಧಿ ಇಂಜಿನಿಯರಿಂಗ್ ಕಾಲೇಜ್ ಕಾರ್ಮಿಕರ ರಸ್ತೆ ಶಾಲೆಗಳನ್ನು ತೆ–ರೆದು ಶೈಕ್ಷಣಿಕ ಕ್ರಾಂತಿ ಮಾಡಿದ್ದೇವೆ, ರಾಷ್ಟೀಯ ಹೆದ್ದಾರಿಗಳು, ಆಸ್ಪತ್ರೆ, ಕಲ್ಯಾಣ ಮಂಟಪಗಳು, ಬಸ್ ನಿಲ್ದಾಣಗಳು, ರೈಲ್ವೆ,ಕುಡಿಯುವ ನೀರಿನ ವ್ಯವಸ್ಥೆ,ಕೆರೆಗಳ ನಿರ್ಮಾಣ, ಕೋಲ್ಡ್‌ಸ್ಟೋರೇಜ್ ಅಭಿವೃದ್ಧಿಪಡಿಸುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅಣಿಯಾಗಿದ್ದೇನೆ. ದೇವರು ಮೇಲೆ ನಂಬಿಕೆ ಇಡಿದ ನನಗೆ ಪ್ರಜೆಗಳೆ ದೇವರು ಎಂದರು . ಕಾಂಗ್ರೆಸ್ ಸರ್ಕಾರ ಜನಪರ ಸರ್ಕಾರವಾಗಿದ್ದು ಸಿದ್ದರಾಮಯ್ಯನವರು ಸದಾ ಜನರ ಹಿತಕ್ಕಾಗಿ ಶ್ರಮಿಸುತ್ತಿದ್ದಾರೆ ಅಂತವರನ್ನು ಮುಖ್ಯಮಂತ್ರಿಗಳನ್ನಾಗಿ ಪಡೆದಿದ್ದು ನಮ್ಮ ಭಾಗ್ಯ, ಭರವಸೆ ನೀಡಿದಂತೆ ನಮ್ಮ ಸರ್ಕಾರದಿಂದ ಜಾರಿಯಾದ ಐದು ಗ್ಯಾರಂಟಿ ಯೋಜನೆಗಳು ಯಾವತ್ತೂ ನಿಲ್ಲುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಶಿಕ್ಷಣಧಿಕಾರಿ ಜಗದೀಶ್,ಪಿಡಬ್ಲ್ಯೂಡಿ ಮಲ್ಲಿಕಾರ್ಜುನ, ಪ್ರಾಸ್ತವಿಕ ಮಾತನಾಡಿದರು. ಜಿ ಪಂ ಮಾಜಿ ಉಪಾಧ್ಯಕ್ಷ ಯಂಕಣ್ಣ ಯರಾಶಿ, ಉಭಯ ತಾಲೂಕುಗಳ ತಹಸೀಲ್ದಾರಾದ ಪ್ರಕಾಶ್ ನಾಸಿ, ಬಸವರಾಜ್ ಬೆಣ್ಣೆಶಿರೂರ, ತಾ ಪಂ ಇಓ ಗಳಾದ ಸಂತೋಷ್ ಪಾಟೀಲ್ ಬಿರಾದರ್, ನೀಲಂ ಮುಖಂಡರಾದ ಮಂಜುನಾಥ್ ಕಡೆಮನಿ, ಅಶೋಕ್ ತೋಟದ, ಸಂಗಮೇಶ್ ಗುತ್ತಿ,ವಿವಿಧ ಇಲಾಖೆಯ ಅಧಿಕಾರಿಗಳು ವೇದಿಕೆಯಲ್ಲಿದ್ದರು. ಗ್ರಾಮದ ಬಸವರಾಜ, ನಿಂಗಪ್ಪ ಗೋಡೆಕಾರ್ ಇನ್ನಿತರರಿದ್ದರು.

# ಪೂರ್ವಭಾವಿ ಸಿದ್ಧತಾ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಫೆ.01 ರಂದು ಮಡಿವಾಳ ಮಾಚಿದೇವ ಜಯಂತಿ, ಫೆ.10 ರಂದು ಕಾಯಕ ಶರಣರ ಜಯಂತಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸುವ ಕುರಿತು ಚರ್ಚಿಸಲು ಜ.23 ರಂದು ಸಂಜೆ 04.30 ಗಂಟೆಗೆ ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಿದ್ಧತಾ ಸಭೆ ಏರ್ಪಡಿಸಲಾಗಿದೆ.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆ: ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮೀನುಗಾರಿಕೆ ಇಲಾಖೆ ವತಿಯಿಂದ 2025–26 ಸಾಲಿನ ಜಿಲ್ಲಾ ವಲಯ ಫಲಾನುಭವಿ ಆಧಾರಿತ ಯೋಜನೆಯಡಿ ಒಟ್ಟು ಗುರಿ 79 ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳ ಕಿಟ್ ವಿತರಿಸಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಗತ್ಯ ದಾಖಲೆಗಳೊಂದಿಗೆ ಆನ್ ಲೈನ್ ವೆಬ್ ಸೈಟ್ https://ballari.nic.in ಗೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನ.79 ಫಲಾನುಭವಿಗಳಿಗೆ ಒಟ್ಟು ಮೂರು ಸುತ್ತಿನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, 79 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂರು ದಿನಗಳ ಕಾಲ ಕೃಷಿ ಮೇಳ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

"ಸಮಗ್ರ ಕೃಷಿ – ಸ್ವಾವಲಂಬಿ ಕೃಷಿ" ಎಂಬ ಧ್ಯೇಯದೊಂದಿಗೆ ಫೆ.05, 06 ಮತ್ತು 07 ರಂದು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಕೃಷಿಮೇಳ–2026 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೇಳದಲ್ಲಿ ಸಮಗ್ರ ಕೃಷಿ ಪದ್ದತಿ ಹಾಗೂ ಇತರೆ ಕುರಿತು ಅರಿವು ಮೂಡಿಸಲಾಗುತ್ತಿದ್ದು, ಬಳ್ಳಾರಿ ಜಿಲ್ಲೆಯ ವಿವಿಧ ಗ್ರಾಮಗಳ ರೈತರು, ರೈತ ಮಹಿಳೆಯರು ಭಾಗವಹಿಸಿ, ಮೇಳದ ಸದುಪಯೋಗಪಡೆದುಕ‌ೊಳ್ಳಬೇಕು ಎಂದು ಬಳ್ಳಾರಿಯ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ತಿಳಿಸಿದ್ದಾರೆ.

# ಸರ್ವಜ್ಞ ವಿದ್ಯಾಪೀಠ:ಅಂಬಿಗರ ಚೌಡಯ್ಯ ಜಯಂತಿ ಆಚರಣೆ



• **ಮಲ್ಲಮ್ಮನುಡಿ ವಾರ್ತೆ ತಾಳಿಕೋಟಿ:**

ಪಟ್ಟಣದ ಪ್ರತಿಷ್ಠಿತ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶ್ರೇಷ್ಠ ವಚನಕಾರ, ದಾರ್ಶನಿಕರಾಗಿರುವ ನಿಜಶರಣ ಶ್ರೀ ಅಂಬಿಗರ ಚೌಡಯ್ಯನವರ ಜಯಂತೋತ್ಸವವನ್ನು ಬುಧವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಮಂಗಳೂರ ಅವರು ಚೌಡಯ್ಯನವರ ಭಾವಚಿತ್ರಕ್ಕೆ ಪೂಜಿಸಲ್ಲಿಸಿ, ಪುಷ್ಪ ನಮನ ಅರ್ಪಿಸಿದರು. ನಂತರ ಮಾತನಾಡಿದ ಅವರು ಅಂಬಿಗರ ಚೌಡಯ್ಯನವರು 12ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣ ಹಾಗೂ ಶ್ರೇಷ್ಠ ವಚನಕಾರರಾಗಿದ್ದಾರೆ. ವೃತ್ತಿಯಲ್ಲಿ ಅಂಬಿಗನಾಗಿದ್ದರೂ, ಪ್ರವೃತ್ತಿಯಲ್ಲಿ ಅನುಭವಿಗಳಾಗಿದ್ದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸಂತೋಷ ಪವಾರ, ಜವಳಗೇರಿ, ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ, ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ , ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕ–ಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ, ಶಿವಲೀಲಾ ಚುಂಚೂರು, ರೂಪಾ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತಾ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ, ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ, ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ, ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾಡಳಿತದಿಂದ 77ನೇ ಗಣರಾಜ್ಯೋತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾಡಳಿತ ವತಿಯಿಂದ 77ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮವನ್ನು ಜ.26 ರಂದು ಬೆಳಿಗ್ಗೆ 09 ಗಂಟೆಗೆ ಬಿಎಂಸಿಆರ್‌ಸಿ ಮೈದಾನದಲ್ಲಿ ಏರ್ಪಡಿಸಲಾಗಿದೆ.

ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ಬೆಳಿಗ್ಗೆ 09 ಗಂಟೆಗೆ ಧ್ವಜಾರೋಹಣ ನೆರವೇರಿಸುವರು.

ಇದಕ್ಕೂ ಮುನ್ನ ಸಚಿವರು, ಅಂದು ಬೆಳಿಗ್ಗೆ 08.20 ಕ್ಕೆ ಡಾ.ರಾಜ್ ಕುಮಾರ್ ಉದ್ಯಾನವನದ ರಾಷ್ಟ್ರಪಿತ ಮಹಾತ್ಮಗಾಂಧೀಜಿಯವರ ಪ್ರತಿಮೆಗೆ ಗೌರವ ಸಮರ್ಪಣೆ ಮಾಡುವರು. ಬಳಿಕ ಬೆಳಿಗ್ಗೆ 09.05 ಕ್ಕೆ ಪಥ ಸಂಚಲನ ವೀಕ್ಷಣೆ ಮಾಡಿ ಗೌರವ ವಂದನೆ ಸ್ವೀಕಾರ ಮಾಡುವರು. ನಂತರ ಗಣರಾಜ್ಯೋತ್ಸವದ ಸಂದೇಶ ನೀಡುವರು. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಘನ ಉಪಸ್ಥಿತಿ ಇರುವರು. ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್, ವಿಧಾನಸಭಾ ಶಾಸಕರಾದ ಬಿ.ನಾಗೇಂದ್ರ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ಈ.ಅನ್ನಪೂರ್ಣ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯುಲು, ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ವಿಜ್ಞಾನ ಗಣಿತ ಮೇಳಕ್ಕೆ ಭರ್ಜರಿ ಸ್ಪಂದನೆ



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಶಾರದಾ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ವಿಜ್ಞಾನ ಮತ್ತು ಗಣಿತ ಮೇಳವನ್ನು ಉತ್ಸಾಹಭರಿತವಾಗಿ ಹಮ್ಮಿಕೊಳ್ಳಲಾಗಿತ್ತು. ಮೇಳವನ್ನು ಶಾಲೆಯ ಉಪಾಧ್ಯಕ್ಷರಾದ ಶ್ರೀಮತಿ ಡಾ. ನಾಗರತ್ನ ಸುಯಜ್ಞ ಹಾಗೂ ಆಡಳಿತ ಮಂಡಳಿ ಸದಸ್ಯರಾದ ಶ್ರೀಯುತ ಹರಿಕುಮಾರ್ ಮತ್ತು ಶ್ರೀಯುತ ರಂಗನಾಥ ಅವರು ಉದ್ಘಾಟಿಸಿದರು.

ಮೇಳದಲ್ಲಿ ಬೇಬಿ ಕ್ಲಾಸ್‌ನಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿಗಳು ಭಾಗವಹಿಸಿ, ಗಣಿತ ಹಾಗೂ ವಿಜ್ಞಾನ ಸಂಬಂಧಿತ ವಿವಿಧ ಪ್ರಯೋಗಗಳು ಮತ್ತು ಮಾದರಿಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳು ಚಂದ್ರಯಾನ, ರಾಕೆಟ್ ಹಾಗೂ ತುಂಗಭದ್ರಾ ಅಣೆಕಟ್ಟಿನ ಮಾದರಿಗಳನ್ನು ನಿರ್ಮಿಸಿ ತಮ್ಮ ಪ್ರತಿಭೆಯನ್ನು ಮೆರೆದರು.

ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಎಲ್ಲಾ ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗದವರು ಶ್ರಮ ವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಕವಿತಾ ವಾದಿರಾಜ್ ಅವರು ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಹುರಿದುಂಬಿಸಿ, ವಿಜ್ಞಾನ–ಗಣಿತ ಮೇಳ ಯಶಸ್ವಿಯಾಗಲು ಪ್ರಮುಖ ಪಾತ್ರವಹಿಸಿದರು.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸಿರುಗುಪ್ಪ ತಾಲ್ಲೂಕಿನ ಹಚ್ಚೊಳ್ಳಿ ಗ್ರಾಮ ನಿವಾಸಿಯಾದ ಜಿ.ಶಿವುರಾಜ ಎನ್ನುವ 50 ವರ್ಷದ ವ್ಯಕ್ತಿ 2025ರ ಡಿ.29 ರಂದು ಕಾಣೆಯಾಗಿರುವ ಕುರಿತು ಹಚ್ಚೊಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಕಾಣೆಯಾದ ವ್ಯಕ್ತಿಯ ಚಹರೆ:

ಎತ್ತರ 5.2, ಗೋಧಿ ಮೈ ಬಣ್ಣ ,ಕೋಲು ಮುಖ, ಕಪ್ಪು ಕೂದಲು, ಕನ್ನಡ, ಭಾಷೆ ಮಾತನಾಡುತ್ತಾನೆ. ವ್ಯಕ್ತಿ ಕಾಣೆಯಾದ ಸಂದರ್ಭದಲ್ಲಿ ಉದ್ದ ತೋಳಿನ ಬಿಳಿ ಗೆರೆಯ ಅಂಗಿ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ.

ವ್ಯಕ್ತಿಯ ಸುಳಿವು ಮಾಹಿತಿ ಸಿಕ್ಕಲ್ಲಿ ಹಚ್ಚೊಳ್ಳಿ ಪೊಲೀಸ್ ಠಾಣೆ ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.



- **ಮಲ್ಲಮ್ಮ ನುಡಿ ವಾರ್ತೆ ಬೀದರ:**

**ನಿನ್ನೆ ಅಖಿಲ್ ಭಾರತ ವೀರಶೈವ ಮಹಾಸಭಾ ರಾಷ್ಟ್ರ ಅಧ್ಯಕ್ಷ ರಾಗಿ ಆಯ್ಕೆ ಆದಂತ್ ಸಚಿವ ಸನ್ಮಾನ್ಯ ಶ್ರೀ ಈಶ್ವರ್ ಖಂಡ್ರೆ ರವರನ್ನು ವಿಧಾನ ಪರಿಷತ್ ಸದಸ್ಯರಾದ ಮಾರುತಿ ಮೂಳೆ, ಲಿಂಗಾಯತ ಸಮಾಜ ಯುವ ಒಕ್ಕೂಟ ರಾಜ್ಯ ಅಧ್ಯಕ್ಷ ರಾದ ಆನಂದ್ ದೇವಪ್ಪ, ಮಡಿವಾಲಪ್ಪ ಮಂಗಲಗಿ ಹಾಗು ಅಶೋಕ್ ಕಣಜಿ ಉಪಸ್ಥಿತರಿದ್ದರು,**

# ದೇಹದಾಢ್ಯ ಸ್ಪರ್ಧೆ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಶ್ರೀ ಮಹರ್ಷಿ ವಾಲ್ಮೀಕಿ ಭವನದಲ್ಲಿ ಜ.22 ಹಾಗೂ 23 ಎರಡು ದಿನಗಳ ಕಾಲ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ ದೇಹದಾಢ್ಯ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಜಿಕೆ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಹಾಗೂ ಬಳ್ಳಾರಿ ಜಿಲ್ಲಾ ಫಿಟ್ನೆಸ್ ಅಸೋಸಿಯೇಶನ್ ಅಧ್ಯಕ್ಷ ಜಿ.ಕೆ.ಸ್ವಾಮಿ ಅವರು ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಳ್ಳಾರಿಯ ಇತಿಹಾಸದಲ್ಲೇ ಮೊದಲ ಬಾರಿಗೆ ದೇಹದಾಢ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ನಮ್ಮ ಜಿ.ಕೆ.ಫೌಂಡೇಶನ್ ಆಶ್ರಯದಲ್ಲಿ ಇಲ್ಲಿವರೆಗೂ ಸಮಾಜಮುಖಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಮಹಿಳೆಯರು, ಪುರುಷರಿಗಾಗಿ ಜಿ.ಕೆ. ಕ್ಲಾಸಿಕ್ ಸೀಸನ್ –1 ಹೆಸರಿನಲ್ಲಿ ನಮ್ಮ ಜಿಕೆ ಫೌಂಡೇಶನ್ ಹಾಗೂ ಬಳ್ಳಾರಿ ಫಿಟ್ನೆಸ್ ಅಸೋಸಿಯೇಶನ್ ಆಶ್ರಯದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಜ.22 ರಂದು ದೇಹದಾಢ್ಯ ಮತ್ತು ಪುರುಷರ ಮೈಕಟ್ಟು ಸ್ಪರ್ಧೆ ಹಾಗೂ ಜ.23 ರಂದು ಮಹಿಳೆಯರು ಹಾಗೂ ಪುರುಷರಿಗಾಗಿ ಪವರ್ ಲಿಫ್ಟಿಂಗ್ (ಬೆಂಚ್ ಪ್ರೆಸ್ ಮತ್ತು ಡೆಡ್ ಲಿಫ್ಟ್ ಮಾತ್ರ) ಸ್ಪರ್ಧೆಗಳನ್ನು ಆಯೋಜಿಸಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಆಧಾರ ಕಾರ್ಡ್ ಪ್ರತಿಯನ್ನು ತರಬೇಕು, ಪ್ರಶಸ್ತಿ ವಿಜೇತರಿಗೆ ಅವಕಾಶವಿಲ್ಲ. ದೇಹದಾಢ್ಯ ಪ್ರವೇಶ ಶುಲ್ಕ 1 ಸಾವಿರ, ಪುರುಷರ ಮೈಕಟ್ಟು 1 ಸಾವಿರ, ಹಾಗೂ ಪವರ್ ಲಿಫ್ಟಿಂಗ್ ನೋಂದಣಿಗೆ 500 ಶುಲ್ಕವಿರಲಿದೆ. ಜಿಕೆ ಕ್ಲಾಸಿಕ್ ಸೀಸನ್ –1, 2026, ಜಿಕೆ ಪ್ರಶಸ್ತಿ ವಿಜೇತರಿಗೆ 51 ಸಾವಿರ ಬಹುಮಾನ, ಜಿಕೆ ಅತ್ಯಂತ ಸ್ನಾಯುಗಳು 15 ಸಾವಿರ ಬಹುಮಾನ, ಜಿಕೆ ಅತ್ಯುತ್ತಮ ಪೋಸರ್ 10 ಸಾವಿರ, ದೇಹ ನಿರ್ಮಾಣ(4 ತೂಕ ವಿಭಾಗ): 55 ಕೆಜಿಗಿಂತ ಕಡಿಮೆ, 55 ಕೆಜಿಯಿಂದ 65 ಕೆಜಿ, 65 ಕೆಜಿ ಯಿಂದ 75 ಕೆಜಿ, 75 ಕೇಜಿಗಿಂತ ಹೆಚ್ಚು, ಮೊದಲನೇ ಬಹುಮಾನ 15 ಸಾವಿರ, 2ನೇ ಬಹುಮಾನ 10 ಸಾವಿರ, 3ನೇ 7 ಸಾವಿರ, 4ನೇ 5 ಸಾವಿರ, 5ನೇ ಬಹುಮಾನ 3 ಸಾವಿರ ಇರಲಿದೆ. ಪುರುಷರ ದೈಹಿಕ ಚಿಕಿತ್ಸೆ(2 ಅಡಿ ಎತ್ತರದ ವಿಭಾಗ): 165 ಸೆಮಿ ನಿಂದಾ 173 ಸೆಮಿ ಹಾಗೂ 173 ಸೆಮಿ ನಿಂದಾ 182 ಸೆಮಿ ವರೆಗೆ, ಮೊದಲನೇ ಬಹುಮಾನ 15 ಸಾವಿರ, 2ನೇ 10 ಸಾವಿರ, 3ನೇ 5 ಸಾವಿರ ಇರಲಿದೆ. ಪುರುಷರ ಲಿಫ್ಟಿಂಗ್ (5 ತೂಕ ವಿಭಾಗ): 53 ಕೆಜಿ, 59 ಕೆಜಿ, 66 ಕೆಜಿ, 74 ಕೆಜಿ, 83 ಕೆಜಿ, 95+ ಕೆಜಿ (ಡೆಡ್ ಲಿಫ್ಟ್ ಮತ್ತು ಬೆಂಚ್ ಮಾತ್ರ)ಕ್ಕೆ ಮೊದಲ ಬಹುಮಾನ 15 ಸಾವಿರ, 2ನೇ 10 ಸಾವಿರ, 3ನೇ 5 ಸಾವಿರ ಇರಲಿದೆ.

# ‘ಅಕ್ಕ ಪಡೆ’ ರಾಜ್ಯಾದಂತೆ ಗಸ್ತು ವಾಹನಗಳ ಉದ್ಘಾಟನೆ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :**



ಮಹಿಳೆಯರು ಹಾಗೂ ಮಕ್ಕಳಿಗೆ ಭಯಮುಕ್ತ ಸಮಾಜ ನಿರ್ಮಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಜಾರಿಗೊಳಿಸಿರುವ ನೂತನ ಹಾಗೂ ಮಹತ್ವಾಕಾಂಕ್ಷಿ ಯೋಜನೆಯಾದ ‘ಅಕ್ಕ ಪಡೆ’ ಗಸ್ತು ವಾಹನಗಳ ಉದ್ಘಾಟನಾ ಕಾರ್ಯಕ್ರಮ ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣದಲ್ಲಿ ಭವ್ಯವಾಗಿ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲೆಗೆ ಒಟ್ಟು 31 ಜಿಲ್ಲೆಗಳಿಗೆ 66 ಅಕ್ಕ ಪಡೆ ಗಸ್ತು ವಾಹನಗಳನ್ನು ಅಧಿಕೃತವಾಗಿ ಉದ್ಘಾಟಿಸಲಾಗಿದ್ದು, ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಪೊಲೀಸ್ ಇಲಾಖೆ ಕೈಗೊಂಡಿರುವ ಈ ಕ್ರಮವನ್ನು ಸಾರ್ವಜನಿಕರು ಹರ್ಷದಿಂದ ಸ್ವಾಗತಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಳ್ಳಾರಿ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪನ್ನೇಕರ್ ಅವರು, ‘ಅಕ್ಕ ಪಡೆ’ ರಾಜ್ಯದಾದ್ಯಂತ 31 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಹಿಳೆಯರು ಹಾಗೂ ಹೆಣ್ಣು ಮಕ್ಕಳು ಯಾವುದೇ ಭಯವಿಲ್ಲದೆ ಬದುಕುವಂತಹ ಸಮಾಜವನ್ನು ನಿರ್ಮಿಸುವುದು ಈ ಪಡೆಯ ಪ್ರಮುಖ ಗುರಿಯಾಗಿದೆ ಎಂದು ಹೇಳಿದರು. ಮಹಿಳೆಯರು ಮತ್ತು ಮಕ್ಕಳು ಸಮಸ್ಯೆ ಎದುರಿಸಿದಾಗ ತಕ್ಷಣ ಸ್ಪಂದಿಸುವ ವ್ಯವಸ್ಥೆ ಕಲ್ಪಿಸುವುದೇ ಅಕ್ಕ ಪಡೆಯ ಉದ್ದೇಶವಾಗಿದ್ದು, “ನಾವಿದ್ದೀವಿ ನಿಮ್ಮ ಜೊತೆ” ಎಂಬ ನಂಬಿಕೆಯನ್ನು ಸಮಾಜಕ್ಕೆ ನೀಡುವುದು ಪೊಲೀಸ್ ಇಲಾಖೆಯ ಕರ್ತವ್ಯ ಎಂದು ಅವರು ತಿಳಿಸಿದರು.

ಮಹಿಳೆಯರು ಹಾಗೂ ಮಕ್ಕಳು ದೌರ್ಜನ್ಯ, ಕಿರುಕುಳ, ಅಪಾಯ ಅಥವಾ ಯಾವುದೇ ಅಹಿತಕರ ಪರಿಸ್ಥಿತಿಗಳನ್ನು ಎದುರಿಸಿದರೆ ಧೈರ್ಯವಾಗಿ ದೂರು ನೀಡಬೇಕು ಎಂದು ಕರೆ ನೀಡಿದ ಅವರು, ಸರ್ಕಾರ ಹಾಗೂ ಪೊಲೀಸ್ ಇಲಾಖೆ ಸಂಪೂರ್ಣವಾಗಿ ನಿಮ್ಮ ಬೆಂಬಲಕ್ಕೆ ನಿಂತಿದೆ ಎಂಬ ಭರವಸೆಯನ್ನು ವ್ಯಕ್ತಪಡಿಸಿದರು.

ಇದೇ ವೇಳೆ ಸಾರ್ವಜನಿಕರಿಗೆ ಅಗತ್ಯ ಮಾಹಿತಿಯನ್ನು ನೀಡಿದ ಎಸ್‌ಪಿ ಅವರು, 181 ಮಹಿಳಾ ಸಹಾಯವಾಣಿ, 112 ತುರ್ತು ಸಹಾಯವಾಣಿ ಹಾಗೂ 1098 ಮಕ್ಕಳ ಸಹಾಯವಾಣಿ ಸಂಖ್ಯೆಗಳ ಮೂಲಕ ತಕ್ಷಣ ನೆರವು ಪಡೆಯಬಹುದಾಗಿದೆ ಎಂದು ತಿಳಿಸಿದರು. ಮಹಿಳೆಯರು ಮತ್ತು ಮಕ್ಕಳು ಈ ಸಹಾಯವಾಣಿ ಸಂಖ್ಯೆಗಳ ಬಗ್ಗೆ ಅರಿವು ಹೊಂದಿರಬೇಕು ಮತ್ತು ಅಗತ್ಯವಿದ್ದಾಗ ಯಾವುದೇ ಹಿಂಜರಿಕೆ ಇಲ್ಲದೆ ಬಳಸಬೇಕು ಎಂದು ಅವರು ಮನವಿ ಮಾಡಿದರು. ಅಕ್ಕ ಪಡೆ ಗಸ್ತು ವಾಹನಗಳು ಶಾಲೆ, ಕಾಲೇಜು, ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳು ಹಾಗೂ ಜನಸಂದಣಿ ಇರುವ ಪ್ರದೇಶಗಳಲ್ಲಿ ನಿರಂತರವಾಗಿ ಗಸ್ತು ತಿರುಗಲಿದ್ದು, ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟುವಲ್ಲಿ ಪ್ರಮುಖ ಪಾತ್ರವಹಿಸಲಿವೆ. ತಕ್ಷಣದ ಸ್ಪಂದನೆ, ದೂರು ಸ್ವೀಕಾರ, ರಕ್ಷಣೆ ಹಾಗೂ ಕಾನೂನು ಕ್ರಮ ಕೈಗೊಳ್ಳುವುದು ಈ ಪಡೆಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜೇಶ್ ಹೊಸಮನ, ನಾಗೇಂದ್ರ ಪ್ರಸಾದ್, ಡಾ. ಸುಮನ್ ಡಿ.ಪಿ., ಮೊಹಮ್ಮದ್ ಏರಿಸ್, ಸುಮಾರ್, ತಮಕೃಷ್ಣ ನಾಯ್ಕ್ ಸೇರಿದಂತೆ ಪೊಲೀಸ್ ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದು, ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಸರ್ಕಾರದ ಈ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡರೆ ಬಳ್ಳಾರಿ ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ಸಾರ್ವಜನಿಕ ಜೀವನದಲ್ಲಿ ಪಾಲ್ಗೊಳ್ಳುವಂತಾಗುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದ ಮೂಲಕ ಮಹಿಳಾ ಹಾಗೂ ಮಕ್ಕಳ ಸುರಕ್ಷತೆ ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಪ್ರಥಮ ಆದ್ಯತೆ ಎಂಬ ಸ್ಪಷ್ಟ ಸಂದೇಶ ಸಮಾಜಕ್ಕೆ ರವಾನೆಯಾಯಿತು.

# ಗಲಭೆ ಪೋಕ್ಸೋ ಪ್ರಕರಣದ ಕುರಿತು ಶ್ರೀರಾಮುಲು ಸುದ್ದಿಗೋಷ್ಠಿ



- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜನವರಿ 1ರಂದು ನಡೆದ ಗಲಭೆ ಸಂದರ್ಭದಲ್ಲಿ ರಾಜಶೇಖರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಸಾಕ್ಷ್ಯಗಳು ಹಾಗೂ ವಿಡಿಯೋ ದೃಶ್ಯಗಳನ್ನು ಸಿಐಡಿಗೆ ಒಪ್ಪಿಸಲಾಗಿದ್ದರೂ, ಈ ಪ್ರಕರಣವನ್ನು ಕಾಂಗ್ರೆಸ್ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಸಿಐಡಿಗೆ ತನಿಖೆ ವರ್ಗಾವಣೆ ಮಾಡಿ ಸರ್ಕಾರ ಕೈಕಟ್ಟಿ ಕುಳಿತಂತೆ ವರ್ತಿಸುತ್ತಿದ್ದು, ಇದರಿಂದ ನ್ಯಾಯ ಪ್ರಕ್ರಿಯೆ ಉದ್ದೇಶಪೂರ್ವಕವಾಗಿ ವಿಳಂಬವಾಗುತ್ತಿದೆ ಎಂದು ಅವರು ಆರೋಪಿಸಿದರು. ನಮಗೆ ನ್ಯಾಯ ಸಿಗುವವರೆಗೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಮೊನ್ನೆ ನಡೆದ ಸಭೆಯಲ್ಲಿ ಈ ವಿಚಾರವಾಗಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರಕ್ಕೆ ಈಗಾಗಲೇ 2.5 ವರ್ಷ ಅವಧಿ ಪೂರ್ಣಗೊಂಡಿದ್ದು, ಈ ಅವಧಿಯಲ್ಲಿ ರಾಜ್ಯಾದ್ಯಂತ ಅಕ್ರಮ ಚಟುವಟಿಕೆಗಳು ಮಿತಿಮೀರಿವೆ ಎಂದು ಹೇಳಿದರು. ಅತ್ಯಾಚಾರ ಪ್ರಕರಣಗಳು, ಗಲಭೆಗಳು ಹಾಗೂ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿತಗೊಂಡಿರುವುದು ಸರ್ಕಾರದ ವೈಫಲ್ಯಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಅಕ್ರಮ ಮರಳು ಸಾಗಣೆ, ಗಾಂಜಾ ಮಾರಾಟ, ಮಟ್ಕಾ ಹಾಗೂ ಇಸ್ಪೇಟ್ ದಂಧೆಗಳು ಯಾವುದೇ ನಿಯಂತ್ರಣವಿಲ್ಲದೆ ನಡೆಯುತ್ತಿದ್ದು, ಸರ್ಕಾರ ಇದನ್ನು ತಡೆಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಆರೋಪಿಸಿದರು. ವಾಲ್ಮೀಕಿ ನಿಗಮದ ಹಗರಣವನ್ನು ಉಲ್ಲೇಖಿಸಿದ ಅವರು, ತೆಲಂಗಾಣ ವಿಧಾನಸಭೆ ಚುನಾವಣೆ ಹಾಗೂ ಕರ್ನಾಟಕ ಲೋಕಸಭಾ ಚುನಾವಣೆಗೆ ಸುಮಾರು 130 ಕೋಟಿ ರೂ. ಹಣ ಬಳಸಲಾಗಿದೆ ಎಂಬ ಆರೋಪವನ್ನು ಮುಂದಿಟ್ಟು, ಇದೀಗ ಪಂಚರಾಜ್ಯ ಚುನಾವಣೆಗಳ ಹಿನ್ನೆಲೆಯಲ್ಲಿ ಸರ್ಕಾರವನ್ನು ಎಟಿಎಂ ರೀತಿಯಲ್ಲಿ ಬಳಸಲಾಗುತ್ತಿದೆ ಎಂದು ಗಂಭೀರ ಆರೋಪ ಮಾಡಿದರು. ಭ್ರಷ್ಟಾಚಾರ ರಾಜ್ಯಾದ್ಯಂತ ಎಲ್ಲಾ ಇಲಾಖೆಗಳಲ್ಲೂ ವ್ಯಾಪಕವಾಗಿ ನಡೆಯುತ್ತಿದ್ದು, ಇದಕ್ಕೆ ಸರ್ಕಾರವೇ ನೇರ ಹೊಣೆಗಾರ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಆರ್.ಬಿ. ತಿಮ್ಮಪುರ ಅವರನ್ನು ತಕ್ಷಣ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದ ಅವರು, ರಾಜ್ಯದ ಜನತೆಗೆ ಹಾಗೂ ಪಲಾರ ಭಾಷಣದ ವಿಚಾರವಾಗಿ ಮೊದಲು ಆರ್.ಬಿ. ತಿಮ್ಮಪುರ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ರಾಜಶೇಖರ್ ಹತ್ಯೆ ಪ್ರಕರಣಕ್ಕೆ ನ್ಯಾಯ, ರಾಜ್ಯದಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರಕ್ಕೆ ಕಡಿವಾಣ ಮತ್ತು ಹೊಣೆಗಾರ ಸಚಿವರ ವಜಾ ಮಾಡುವವರೆಗೂ ಹೋರಾಟ ಮುಂದುವರಿಯಲಿದೆ ಎಂದು ಅವರು ಎಚ್ಚರಿಸಿದರು.

ಇದೇ ವೇಳೆ ಜನಾರ್ಧನ್ ರೆಡ್ಡಿ ಅವರ ನಿವಾಸದ ಬಳಿ ಇತ್ತೀಚೆಗೆ ನಡೆದ ಗಲಭೆ ಹಾಗೂ ಬಿಜೆಪಿ ವತಿಯಿಂದ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ಪೋಕ್ಸೋ ಪ್ರಕರಣದ ಕುರಿತು ಮಾತನಾಡಿದ ಬಿಜೆಪಿ ಹಿರಿಯ ನಾಯಕ ಬಿ. ಶ್ರೀರಾಮುಲು, ಈ ವಿಷಯವನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಸಮಾವೇಶದಲ್ಲಿ ಮಾತನಾಡುವ ವೇಳೆ ಪೋಕ್ಸೋ ಪ್ರಕರಣದ ಕುರಿತು ತಾವೇ ಪ್ರಸ್ತಾಪಿಸಿ ಮಾತನಾಡಿದ್ದಾಗಿ ಸ್ಪಷ್ಟಪಡಿಸಿದ ಅವರು, ಯಾವುದೇ ರೀತಿಯಲ್ಲೂ ಸಂತ್ರಸ್ಥರಿಗೆ ನೋವುಂಟು ಮಾಡುವ ಉದ್ದೇಶ ತಮ್ಮದಾಗಿರಲಿಲ್ಲ ಎಂದು ಹೇಳಿದರು.

ಪೋಕ್ಸೋ ಪ್ರಕರಣವು ಅತ್ಯಂತ ಸೂಕ್ಷ್ಮ ಹಾಗೂ ಗಂಭೀರ ವಿಷಯವಾಗಿದ್ದು, ಅದನ್ನು ಅತ್ಯಂತ ಜವಾಬ್ದಾರಿಯಿಂದ ನೋಡಬೇಕೆಂದು ಹೇಳಿದ ಶ್ರೀರಾಮುಲು ಅವರು, ತಮ್ಮ ಮಾತುಗಳಿಂದಾಗಿ ಸಂತ್ರಸ್ಥರ ಕುಟುಂಬಕ್ಕೆ ಯಾವುದಾದರೂ ರೀತಿಯಲ್ಲಿ ನೋವಾಗಿದ್ದರೆ

ನಾನು ಅವರ ಕುಟುಂಬಕ್ಕೆ ಕ್ಷಮೆ ಕೇಳುತ್ತೇನೆ ಎಂದು ಹೇಳಿದರು. ಸಂತ್ರಸ್ಥ ಕುಟುಂಬದ ನೋವನ್ನು ತಾವು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದು, ಅವರು ನನ್ನ ಮಗಳು ಇದ್ದಂಗೆ ಅವರಿಗೆ ನ್ಯಾಯ ದೊರಕಬೇಕು ಎಂಬುದೇ ತಮ್ಮ ನಿಲುವು ಎಂದು ಸ್ಪಷ್ಟಪಡಿಸಿದರು.



**ಚಿಟಗುಪ್ಪ; ಕನ್ನಡ ಸೇನೆ ಕರ್ನಾಟಕ ಸಂಘಟನೆ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ರವರ ಸಮ್ಮುಖದಲ್ಲಿ 2026ನೇ ಸಾಲಿನ ಮಲ್ಲಮ್ಮ ನುಡಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಯುವ ಉದ್ಯಮಿ ನರಸಪ್ಪ ನರನಾಳ, ಪತ್ರಕರ್ತ ರಾಜಕುಮಾರ ಆರ್. ಹಡಪದ, ರಮೇಶ್ ಧೂಳ, ಶಿವರಾಜ ಸ್ವಾಮಿ, ಮಾಣಿಕ ರೆಡ್ಡಿ, ತಿಪ್ಪಣ್ಣ ರೆಡ್ಡಿ, ಕಾಶಿನಾಥ್ ಸೀತಾಳಗೇರಾ, ಅಶೋಕ ಹೊಸಳ್ಳಿ ಸೇರಿದಂತೆ ಇತರರು ಉಪಸ್ಥಿತರಿದ್ದರು.(ಮಲ್ಲಮ್ಮ ನುಡಿ ಚಿತ)**

# ಅಂಬಿಗರ ಚೌಡಯ್ಯನವರ ತತ್ವ ಆದರ್ಶವನ್ನು ಪಾಲಿಸಬೇಕು:- ಸಚಿವ ರಹೀಮ್ ಖಾನ್

- **ಮಲ್ಲಮ್ಮ ನುಡಿ ವಾರ್ತೆ ಬೀದರ:**

ದೇಶಕ್ಕೆ ಸಂದೇಶ ಸಾರಿದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ತತ್ವ ಆದರ್ಶವನ್ನು ಪಾಲಿಸಬೇಕು ರಹೀಮ್ ಖಾನ್ ತಿಳಿಸಿದ್ದಾರೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೀದರ ಇವರ ಸಂಯುಕ್ತಾಶ್ರಯದಲ್ಲಿ



ಆಯೋಜಿಸಿದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಪೂಜ್ಯ ಚನ್ನಬಸವ ಪಟ್ಟದೇವರ ರಂಗ ಮಂದಿರದಲ್ಲಿ ನಡೆಯಿತು, ಕಾರ್ಯಕ್ರಮವನ್ನು ನಾಡಗೀತೆಯೊಂದಿಗೆ ಚಾಲನೆ ನೀಡಲಾಯಿತು, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವ ರಹೀಮ್ ಖಾನ್ ಶರಣ ಚಳವಳಿಯಲ್ಲಿ ಪಾಲ್ಗೊಂಡು, ಸಾಮಾಜಿಕ ಪರಿವರ್ತನೆಗಾಗಿ ಬಸವಣ್ಣನವರ ಹೆಗಲಿಗೆ ಹೆಗಲಾಗಿ ನಿಂತವರಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರು ಪ್ರಮುಖರು.ತಮ್ಮ ನೇರ,ನಿಷ್ಠುರ,ತೀಕ್ಷ್ಣ ಬರಹಗಳ ಮೂಲಕ ವರ್ಣವ್ಯವಸ್ಥೆ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಿದರು.ನಿರ್ಮಲ ಭಕ್ತಿ, ನಿಸ್ವಾರ್ಥ ಸೇವೆಯೇ ಭಗವಂತನನ್ನು ಒಲಿಸಿಕೊಳ್ಳುವ ಮಾರ್ಗಗಳು ಒಳಗೊಂಡಿದೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಮಹತ್ವವನ್ನು ಸಾರಿದ ಮಹಾನ್ ಶರಣರಾದ ಅಂಬಿಗರ ಚೌಡಯ್ಯ ಅವರು 12ನೇ ಶತಮಾನದಲ್ಲೇ ಅಸ್ಪೃಶ್ಯತೆಯ ವಿರುದ್ಧ ಧೈರ್ಯವಾಗಿ ಹೋರಾಡಿ,ತಮ್ಮ ವಚನಗಳ ಮೂಲಕ ಸಮಾಜದಲ್ಲಿದ್ದ ಅಂಕುಡೊಂಕುಗಳನ್ನು ತಿದ್ದುವ ಮಹತ್ವದ ಕಾರ್ಯ ಮಾಡಿದರು.

ವಿಶೇಷ ಉಪನ್ಯಾಸನವನ್ನು ನೀಡಿ ಮಾಹಿತಿ ನೀಡಿದ ಸಾಹಿತಿಗಳಾದ ಮಾಣಿಕ್ ನೇಳಗಿ ಶರಣ ಚಳವಳಿಯಲ್ಲಿ ಪಾಲ್ಗೊಂಡು,ಸಾಮಾಜಿಕಪರಿವರ್ತನೆಗಾಗಿ ಬಸವಣ್ಣನವರ ಹೆಗಲಿಗೆ ಹೆಗಲಾಗಿ ನಿಂತವರಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರಿಗೆ ಸಲ್ಲುತ್ತದೆ

ತನ್ನ ಸಂಪತ್ತನ ದಾನವಾಗಿ ಕೊಟ್ಟಿದ್ದಾರೆ 278 ವಚನಗಳು ರಚನೆ ಮಾಡಿದರೆ, ಆಚಾರ ವಿಚಾರಗಳು ಒಂದೆ

ಆಗಿರಬೇಕು ಆವಾಗ ಸ್ವಾರ್ಥಕವಾಗುತ್ತದೆ, ಕಾಯಕದಲ್ಲಿ ಭಕ್ತಿವಂತಿಕೆಯಿಂದ ಇರಬೇಕು ನಮ್ಮ ಸಮಾಜದವರು ಒಳ್ಳೆಯ ಸಂಸ್ಕಾರ ಶಿಕ್ಷಣ ಬೆಳೆಸಿಕೊಳ್ಳಬೇಕು, ಅಂಬಿಗರ ಚೌಡಯ್ಯನವರ ತತ್ವ ಸಿದ್ಧಾಂತ ಆದರ್ಶವನ್ನು ಪಾಲಿಸಬೇಕಾಗಿದೆ,ಆರ್ಥಿಕವಾಗಿ ಸಬಲವಾಗಿರಬೇಕು,ದುಶ್ಚಟಗಳಿಗೆ ಬಲಿ ಯಾಗಬೇಡಿ ಎಲ್ಲಿ ಭಾವೈಕ್ಯತೆ ಬೆಳೆಯುತದೋ ಅಲ್ಲಿ ನಾವು ಬೆಳೆಯುತ್ತದೆ,

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಶೈಲೇಂದ್ರ ಬೆಲ್ದಾಳೆ ಅವರು 12ನೇ ಶತಮಾನದಲ್ಲಿ ಹಾವೇರಿಯಿಂದ ಬಸವಕಲ್ಯಾಣಕ್ಕೆ ನಿಜಶರಣ ಅಂಬಿಗರ ಚೌಡಯ್ಯನವರ ಆಗಮಿಸಿದರು, ದೇಶ ಮೊದಲು ಆವಾಗ 770 ಶರಣರು ಇದ್ದರು, ಅದರಲ್ಲಿ ಶ್ರೇಷ್ಠ ಶರಣರೆಂದರೆ ಅದು ಅಂಬಿಗರ ಚೌಡಯ್ಯನವರು ಇವರ ಕೆಲಸವೇ ಒಂದು ದಡದಿಂದ ಇನ್ನೊಂದು ದಡಕ್ಕೆ ಸೇರಿಸುವ

ಕೆಲಸವೇ ಚೌಡಯ್ಯನವರಾಗಿತ್ತು,ತಮ್ಮ ನೇರ,ನಿಷ್ಠುರ ಬರಹಗಳ ಮೂಲಕ ವರ್ಣವ್ಯವಸ್ಥೆ ಒಳ್ಳೆಯ ಆದರ್ಶ ವ್ಯಕ್ತಿಯಾಗಿದ್ದರು,ಅಸ್ಪೃಶ್ಯತೆಯ ವಿರುದ್ಧ ಧೈರ್ಯವಾಗಿ ಹೋರಾಡಿದರು ಎಂದು ಹೇಳಿದರು,

ಅಪರ ಜಿಲ್ಲಾಧಿಕಾರಿಯಾದ ಶಿವಾನಂದ ಕರಾಳೆ, ಟೋಕರಿ ಕೋಳಿ ಸಮಾಜದ ಜಿಲ್ಲಾಧ್ಯಕ್ಷರಾದ ಜಗನ್ನಾಥ ಜಮಾದಾರ, ಉಪಾಧ್ಯಕ್ಷರಾದ ಸುನಿಲ್ ಖಾಶೆಂಪುರೆ, ಪುರಸಭೆ ಅಧ್ಯಕ್ಷರಾದ ಮೊಹ್ಮದ ಗೌಸ್ , ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷರಾದ ರಾಜಕುಮಾರ ಕರಣೆ, ಅಂಬಿಗರ ಚೌಡಯ್ಯನವರ ಅಧ್ಯಕ್ಷರಾದ ಅಶೋಕ್ ಬಂಡೆ, ಸುನಿಲ್ ಭಾವಿಕಟ್ಟಿ, ಕನ್ನಡ ಜಾನಪದ ಸದಸ್ಯರಾದ

ವಿಜಯಕುಮಾರ ಸೋನಾರೆ, ಅನೇಕರು ಜಯಂತಿಯಲ್ಲಿ ಭಾಗವಹಿಸಿದರು, ಕಾರ್ಯಕ್ರಮದ ನಾಡಗೀತೆಯನ್ನು ನಾದಬ್ರಹ್ಮ ಕಲಾ ತಂಡದಿಂದ ಮಲ್ಲಿಕಾರ್ಜುನ ಸ್ವಾಮಿ ನೇತೃತ್ವದ ತಂಡದಿಂದ ನೆರವೇರಿತು.

# ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಆಚರಣೆ



- **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಸಂಗೋಳಗಿ ಗ್ರಾಮ ಪಂಚಾಯತನಲ್ಲಿ ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಮಹತ್ವವನ್ನು ಸಾರಿದ ಮಹಾನ್ ಶರಣರಾದ ಅಂಬಿಗರ ಚೌಡಯ್ಯ ಅವರು 12ನೇ ಶತಮಾನದಲ್ಲೇ ಅಸ್ಪೃಶ್ಯತೆಯ ವಿರುದ್ಧ ಧೈರ್ಯವಾಗಿ ಹೋರಾಡಿ, ತಮ್ಮ ವಚನಗಳ ಮೂಲಕ ಸಮಾಜದಲ್ಲಿದ್ದ ಅಂಕುಡೊಂಕುಗಳನ್ನು ತಿದ್ದುವ ಮಹತ್ವದ ಕಾರ್ಯ ಮಾಡಿದರು. ಅವರ ವಚನಗಳು ಇಂದಿಗೂ ಸಮಾನತೆ ಮತ್ತು ಶೋಷಣೆಯ ವಿರುದ್ಧ ಹೋರಾಟಕ್ಕೆ ಪ್ರೇರಣೆಯಾಗಿದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಆಚರಿಸಲಾಯಿತು,

ಇದೆ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಾಂತವೀರ ಹಜ್ಜರಗಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪೂಜಾಶ್ರೀ ಬಿರಾದಾರ, ಕಾರ್ಯದರ್ಶಿ ಕವಿತಾ, ಚಂದ್ರಶೇಖರ್ ಚನ್ನಶೆಟ್ಟಿ, ಅಶೋಕ್ ಪಾಟೀಲ್, ಬಾಬುರಾವ್ ಪಾಟೀಲ್, ಚಂದ್ರಕಾಂತ್ ಜಮಾದಾರ, ಕಾಶಿನಾಥ್ ಮಾಸ್ಟರ್ ಹತ್ತಿ,ಅಶೋಕ್ ನಿಂಗೋಜಿ, ಶರಣು ಜಮಾದಾರ, ಶ್ರೀನಿವಾಸ ಸೋನಿ,ವೈಜಿನಾಥ ಭೈರಿ, ಅನೇಕ ಸಮಾಜದ ಮುಖಂಡರು ಜಯಂತಿಯಲ್ಲಿ ಭಾಗವಹಿಸಿದರು,

# ಅಂಬಿಗರ ಚೌಡಯ್ಯ ಜಯಂತಿ ಆಚರಣೆ



- **ಮಲ್ಲಮ್ಮ ನುಡಿ ವಾರ್ತೆ ಮುದಗಲ್:**

ಪುರಸಭೆ ಕಾರ್ಯಾಲಯದಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಗುರುವಾರ ಮಾಡಲಾಯಿತು.

ಅಂಬಿಗರ ಚೌಡಯ್ಯ ಅವರ ಭಾವಚಿತ್ರಕ್ಕೆ ಪುರಸಭೆ ಸಿಬ್ಬಂದಿ ಚೆನ್ನಮ್ಮ ದಳವಾಯಿಮಠ ಪೂಜೆ ಸಲ್ಲಿಸಿದರು. ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ಪುಷ್ಪಾರ್ಚನೆ ಮಾಡಿದರು.

ಪುರಸಭೆ ಸಿಬ್ಬಂದಿಗಳು ಅಂತೋಣಿ, ನಿಸಾರ್ ಅಹಮದ್, ಬಸವರಾಜ್ ಕೊಟ್ಟೂರ್, ಬಾಬಾ, ಜಿಲಾನಿ ಪಾಷ ರಂಗನಾಥ, ವೆಂಕಣ್ಣ ದೇಶ್ಪಾಂಡೆ, ಶಿವು, ಚಂದ್ರು ಸೇರಿದಂತೆ ಇತರರಿದ್ದರು.

# 6ನೇ ತರಗತಿ ವಸತಿ ಶಾಲೆಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸಮಾಜ ಕಲ್ಯಾಣ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುವ ವಿವಿಧ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಾತಿಗೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2026-27 ಶೈಕ್ಷಣಿಕ ಸಾಲಿಗೆ ಜಿಲ್ಲೆಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್ ಅಂಬೇಡ್ಕರ್, ಗಾಂಧಿತತ್ವ, ಏಕಲವ್ಯ ಸೇರಿದಂತೆ ಒಟ್ಟು 21 ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಾತಿಗೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದ್ದು, ಪ್ರಸ್ತುತ 5ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಹತ್ತಿರದ ವಸತಿ ಶಾಲೆಯ ಪ್ರಾಂಶುಪಾಲರ ಕಚೇರಿಗೆ ಭೇಟಿ ನೀಡಬಹುದು.

ಅನ್ ಲೈನ್ ಮೂಲಕ ಹತ್ತಿರದ ವಸತಿ ಶಾಲೆ, ಕಾಲೇಜುಗಳ ಮೂಲಕ ಅರ್ಜಿ ಸಲ್ಲಿಸಲು ಫೆ.02 ಕೊನೆಯ ದಿನವಾಗಿರುತ್ತದೆ. ಪ್ರವೇಶ ಪರೀಕ್ಷೆ ಮಾ.01 ರಂದು ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್ ಸೈಟ್ https://cetonline.karnataka.gov.in/kea/krei2026 ಅಥವಾ ದೂ.08023-460460 ಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆಂಭಾವಿ:ಪಟ್ಟಣದ ಹಿರೇಮಠದ ಪೀಠಾಧಿಪತಿ ಷ.ಬ್ರ. ಚನ್ನಬಸವ ಶಿವಾಚಾರ್ಯರು ಶ್ರೀಮಠದಲ್ಲಿ ಮಲ್ಲಮ್ಮ ನುಡಿ ಕ್ಯಾಲೆಂಡರ್ ಅನಾವರಣ ಮಾಡುವುದರ ಮೂಲಕ ಪತ್ರಿಕೆಗೆ ಶುಭಕೋರಿದರು.

# ಕಲಿಕಾ ಹಬ್ಬ ಸದ್ಬಳಕೆಗೆ ಸಹಕರಿಸಿ



- **ಮಲ್ಲಮ್ಮನುಡಿ ವಾರ್ತೆ ಕುಕನೂರು :**

ಸರ್ಕಾರ ಹಮ್ಮಿಕೊಳ್ಳುವ ಕಲಿಕಾ ಹಬ್ಬ ಕಾರ್ಯಕ್ರಮದ ನಿಮಿತ್ತ ಸದ್ಬಳಕೆ ಮಾಡಿಕೊಂಡು ಅಭಿವೃದ್ಧಿಗೆ ಸಹಕರಿಸಬೇಕೆಂದು ನೌಕರ ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ನೌಕರ ಸಂಘದ ತಾಲೂಕು ಅಧ್ಯಕ್ಷ ಮಹೇಶ್ ಸಬರದ ಹೇಳಿದರು.

ಪಟ್ಟಣದ ವಿನೋಬನಗರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾದ ಪ್ರಸಕ್ತ 25-26 ನೇ ಸಾಲಿನ ಜಿಲ್ಲಾ ಪಂ, ತಾಪಂ ಶಿಕ್ಷಣ ಮತ್ತು ಸಮನ್ವಯಾ ಅಧಿಕಾರಿ,ಪಪಂ ಸಂಯೋಗದಲ್ಲಿ ನಡೆದ ಕ್ಲಸ್ಟರ್ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಅವರು ಮಾತನಾಡಿದರು. ರಾಷ್ಟ್ರದ ಅಭಿವೃದ್ಧಿಗೆ ಶೈಕ್ಷಣಿಕ ಅಭಿವೃದ್ಧಿ ಪೂರಕವಾಗಿದ್ದು

ಆ ನಿಟ್ಟಿನಲ್ಲಿ ಸರ್ಕಾರ ಮಕ್ಕಳ ಶಿಕ್ಷಣಕ್ಕಾಗಿ ಹತ್ತಾರು ಯೋಜನೆಗಳನ್ನು ನೀಡುವ ಮೂಲಕ ಶಿಕ್ಷಣಕ್ಕೆ ಪ್ರೇರಣೆ ನೀಡುತ್ತಿದೆ, ಅಂತಹ ಮಹತ್ವದ ಯೋಜನೆಯಲ್ಲಿ ಕಲಿಕಾ ಹಬ್ಬವು ಒಂದು ಅತ್ಯಂತ ಪ್ರಚೋದನಕಾರಿ ಕಾರ್ಯಕ್ರಮ ವಾಗಿದ್ದು, ಶಿಕ್ಷಕರು ಮತ್ತು ಪಾಲಕರು ಇದರ ಸದ್ಬಳಕೆಗೆ ಶ್ರಮಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಗಳ ನೌಕರ ಸಂಘದ ತಾಲೂಕು ಅಧ್ಯಕ್ಷ ಮಾರುತೇಶ್ ತಳವಾರ್ ಮಾತನಾಡಿ ಕಲಿಕಾ ಹಬ್ಬ ಕಾರ್ಯಕ್ರಮ ದಲ್ಲಿ ಕನ್ನಡ ಮತ್ತು ಗಣಿತ ಎರಡು ವಿಷಗಳಿದ್ದು,17 ಕಲಿಕಾಫಲಗಳಿವೆ

ಇಂತಹ ವಿಷಯಗಳಿಂದ ಹಿಂದುಳಿದ ಮಕ್ಕಳನ್ನು ಪ್ರೇರೇಪಿಸುವದು ಕಾರ್ಯಕ್ರಮದ ಉದ್ದೇಶವಾಗಿದೆ ಇದರಲ್ಲಿ ಶಿಕ್ಷಕರು, ಪಾಲಕರು ಸೇರಿ ಮಕ್ಕಳಿಗೆ ರಸ ಮಂಜರಿ, ಚಟುವಟಿಕೆ ಮಾಡುವ ಮೂಲಕ ಕಾರ್ಯಕ್ರಮ ಯಶ್ವಿಗೊಳಿಸುವಂತೆ ಮನವಿ ಮಾಡಿದರು.

ಜಿಲ್ಲಾ ಚುಸಾಪ ಜಿಲ್ಲಾ ಅಧ್ಯಕ್ಷ ರುದ್ರಪ್ಪ ಬಂಡಾರಿ ಮಾತನಾಡಿ ಸರ್ಕಾರಿ ಶಾಲೆ ಎಂದರೆ ಯಾವುದಕ್ಕೂ ಹಿನ್ನಡೆ ಆಗಬಾರದು ಎನ್ನುವ ಉದ್ದೇಶದಿಂದ ಸರಕಾರ ಇಂತಹ ಪ್ರೇರಣೆ

ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು ಪ್ರತಿಯೊಬ್ಬರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲಿಸಿ ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಹೇಳಿದರು.ಸಿಆರ್ ಪಿ ಪಿರಸಾಬ್ ದಫೇದಾರ್ ಪ್ರಾಸ್ತವಿಕ ಮಾತನಾಡಿದರು,

ಪಪಂ ಅಧ್ಯಕ್ಷ ಲಲಿತಮ್ಮ ಯಡಿಯಾಪುರ,ಉದ್ಘಾಟಿಸಿದರು,ಎಸ್ ಡಿ ಎಮ್ ಸಿ ಅಧ್ಯಕ್ಷ ಮರ್ಧಾನ ನಾಯಕ್ ಅಧ್ಯಕ್ಷತೆ ವಹಿಸಿದ್ದರು,

ಉಪಾಧ್ಯಕ್ಷೆ ಪಾರ್ವತಿ ಅನಸಿ, ಸ.ಶಿ ಶಾಂತಾ ಹಿರೇಮಠ, ಗಿರಿಜಾ, ಮೆಹಬೂಬ್ ಗುಡಿಹಿಂದಲ,. ಮುಖ್ಯ ಶಿ ಶರಣಪ್ಪ ರಾವಣಕಿ ವೇದಿಕೆಯಲ್ಲಿದ್ದರು ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು

# ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಿದವರು ನಿಜಶರಣ ಅಂಬಿಗರ ಚೌಡಯ್ಯ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ನೇರ, ನಿಷ್ಠುರ, ತೀಕ್ಷ್ಣ ಬರಹಗಳ ಮೂಲಕ ವರ್ಣವ್ಯವಸ್ಥೆ, ಲಿಂಗ ತಾರತಮ್ಯ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಅನಿಷ್ಟಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಿದವರು ನಿಜಶರಣ ಅಂಬಿಗರ ಚೌಡಯ್ಯನವರು ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬಿಗ ಎಂದರೆ ಭರವಸೆಯ ಬೆಳಕು ಎಂದು ಸಾರಿದ ಮಹಾನ್ ವಚನಕಾರ ಅಂಬಿಗರ ಚೌಡಯ್ಯ.12 ನೇ ಶತಮಾನದ ಶಿವಶರಣರ ಸಾಲಿನಲ್ಲಿ ಇವರ ಸಹ ಸಮಾನರಾಗಿದ್ದರು. ಸಾಮಾಜಿಕ ಪರಿವರ್ತನೆಗಾಗಿ ಬಸವಣ್ಣನವರ ಹೆಗಲಿಗೆ ಹೆಗಲಾಗಿ ನಿಂತವರಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರು ಪ್ರಮುಖರು. ನಿರ್ಮಲ ಭಕ್ತಿ, ನಿಸ್ವಾರ್ಥ ಸೇವೆಯೇ ಭಗವಂತನನ್ನು ಒಲಿಸಿಕೊಳ್ಳುವ ಮಾರ್ಗಗಳು ಎಂದು ಬಿಂಬಿಸಿದವರು ಚೌಡಯ್ಯನವರು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಸರ್ವರಿಗೆ 'ಸಮಬಾಳು-ಸರ್ವರಿಗೆ ಸಮಪಾಲು' ಎನ್ನುವ ದಿಸೆಯಂತೆ, 2014 ರಲ್ಲಿ ಶಿವಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮ ಆಚರಣೆಗೆ ನಿರ್ಧರಿಸಲಾಯಿತು ಎಂದು ತಿಳಿಸಿದರು.

ಸಂಗನಕಲ್ಲಿನ ನಿವೃತ್ತ ಶಿಕ್ಷಕ ಕೆ.ಬಿ. ಸಿದ್ದಲಿಂಗಪ್ಪ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಅಂಬಿಗರ ಚೌಡಯ್ಯ 12 ನೇ ಶತಮಾನದಲ್ಲಿ ಜೀವಿಸಿದ್ಧ ಶಿವಶರಣ ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವ ಇವರದು. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭವಿಯಾಗಿದ್ದವರು. ಇವರು ನೇರ ನಿರ್ಭೀತ ನುಡಿಗಳಿಂದ ವಚನಗಳನ್ನು ಬರೆದಿರುವುದು ನಾವು ಕಾಣಬಹುದಾಗಿದೆ ಎಂದರು.

ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕಿನ ಶಿವಪುರ(ಚೌಡದಾನಪುರ) ಗ್ರಾಮದಲ್ಲಿ ಜನಿಸಿದ ಚೌಡಯ್ಯನವರು ತಾಯಿ ಪಂಪಾದೇವಿ, ತಂದೆ ವಿರೂಪಾಕ್ಷನ ಮಗನಾಗಿದ್ದರು. ವಚನಕಾರ ಅಂಬಿಗರ ಚೌಡಯ್ಯ ಎಂಬ ಅಂಕಿತನಾಮದೊಂದಿಗೆ ಸುಮಾರು 279 ವಚನಗಳನ್ನು ಬರೆದರು. ಅವರ ಪದ್ಯಗಳು ಅವರ ಆಳವಾದ ಅನುಭವಗಳು ಮತ್ತು ಸಾಮಾಜಿಕ ಪ್ರಜ್ಞೆಯ ಪ್ರತಿಬಿಂಬವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆ.ಆರ್. ಎರೇಗೌಡ ತಂಡ ವಚನ ಸಂಗೀತ ಪ್ರಸ್ತುತಪಡಿಸಿದರು.

*ಗಮನಸೆಳೆದ ಮೆರವಣಿಗೆ:

ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಅಂಗವಾಗಿ ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಯಿತು. ವಿವಿಧ ಸಾಂಸ್ಕೃತಿಕ ಕಲಾತಂಡಗಳು ಬಹಗವಹಿಸಿ ಮೆರಗು ನೀಡಿದವು. ಮೆರವಣಿಗೆಯಲ್ಲಿ ಕಳಸ-ಕುಂಭ ಹೊತ್ತ ನೂರಾರು ಮಹಿಳೆಯರು ಗಮನಸೆಳೆದರು.

ಮೆರವಣಿಗೆಯು ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ- ರೈಲ್ವೇ ನಿಲ್ದಾಣ ರಸ್ತೆ- ಹಳೆ ಜಿಲ್ಲಾಧಿಕಾರಿಗಳ ಕಚೇರಿ ರಸ್ತೆ- ಹೆಚ್. ಆರ್.ಗವಿಯಪ್ಪ ವೃತ್ತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದವರೆಗೆ ನಡೆಯಿತು.

ಕಾರ್ಯಕ್ರಮದಲ್ಲಿ ಬಳ್ಳಾರಿ ಜಿಲ್ಲಾ ಗಂಗಾಮತಸ್ಥರ ಸಂಘದ ಅಧ್ಯಕ್ಷ ಬಿ.ಮೌಲಾಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ನಿವೃತ್ತ ಆರ್ ಟಿಒ ಅಧಿಕಾರಿ ಪಂಪಾಪತಿ, ನಿವೃತ್ತ ಚಿತ್ರಕಲಾ ಶಿಕ್ಷಕ ರಮೇಶ್.ಯು., ನಿವೃತ್ತ ಕೆಕೆಆರ್ ಟಿಸಿ ಅಧಿಕಾರಿ ಹನುಮಂತಪ್ಪ, ಸಮಾಜದ ಮುಖಂಡರಾದ ಗಣೇಶ್ ಬಾರಿಕಾರ, ರಂಗಸ್ವಾಮಿ, ಹುಲುಗಪ್ಪ, ಮೋಹನ್, ದ್ರಾಕ್ಷಾಯಿಣಿ ಸೇರಿದಂತೆ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಹಾರಕೂಡ ಶ್ರೀ ಮಠದಲ್ಲಿ ಪ್ರಶಸ್ತಿ ಪ್ರದಾನ

- **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ:**

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಶ್ರೀ ಚನ್ನಬಸವೇಶ್ವರ ಸಂಸ್ಥಾನ ಹಿರೇಮಠ ಸುಕ್ಷೇತ್ರ ಹಾರಕೂಡ ಹಾಗೂ ಸೂಗಯ್ಯ ಹಿರೇಮಠ ಸಾಹಿತ್ಯ ಸಂಸ್ಕೃತಿ ಟ್ರಸ್ಟ್ (ರಿ) ಕಲಬುರಗಿ ಇವರ ಸಹಯೋಗದಲ್ಲಿ ಪ್ರೊ. ಸೂಗಯ್ಯ ಹಿರೇಮಠ ಸ್ಮರಣಾರ್ಥ 2025ನೇ ಸಾಲಿನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಇದೇ 23. ರಂದು ಬೆಳಿಗ್ಗೆ 11-00 ಗಂಟೆಗೆ ಪೂಜ್ಯ ಶ್ರೀ ಷ.ಬ್ರ ಡಾ. ಚನ್ನವೀರ ಶಿವಾಚಾರ್ಯರು, ಸಂಸ್ಥಾನ ಹಿರೇಮಠ ಹಾರಕೂಡ ರವರ ಪಾವನ ಸಾನಿಧ್ಯದಲ್ಲಿ ಜರುಗಲಿದೆ. ಕೃಷ್ಣಾಕಾಡಾ ಅಭಿವೃದ್ಧಿ ಪ್ರಾಧಿಕಾರಿ ಮಾಜಿ ಅಧ್ಯಕ್ಷರಾದ ಶರಣಪ್ಪ ತಳವಾರ ಉದ್ಘಾಟಿಸಲಿದ್ದಾರೆ. ಕಲಬುರ್ಗಿ ಸಾಹಿತಿಗಳಾದ ಡಾ. ಸದಾನಂದ ಪೆರ್ಲ ಪ್ರಶಸ್ತಿ ಪ್ರದಾನ. ಮುಖ್ಯ ಅತಿಥಿಗಳಾಗಿ ಕಲಬುರ್ಗಿಯ ನಿವೃತ್ತ ವೈದ್ಯಧಿಕಾರಿಗಳಾದ ಡಾ. ಮಲ್ಲಿಕಾರ್ಜುನ ಮುಕ್ಕಾ.ಕಲಬುರ್ಗಿಯ ಸಗರನಾಡು ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ವೆಂಕಟೇಶ್ ನೀರಡಗಿ. ಕಲಬುರ್ಗಿಯ ಸಾಹಿತಿಗಳಾದ ಡಾ. ಗವಿಸಿದ್ದಪ್ಪ ಪಾಟೀಲ. ಅಧ್ಯಕ್ಷತೆ : ಪ. ಮಾನು ಸಗರ ಗೌರವಾಧ್ಯಕ್ಷರು, ಸೂಗಯ್ಯ ಹಿರೇಮಠ ಟ್ರಸ್ಟ್, ಕಲಬುರ್ಗಿ. ಗೌರವ ಉಪಸ್ಥಿತಿ ನಟರಾಜ ಎಸ್. ಹಿರೇಮಠ ಅಧ್ಯಕ್ಷರು, ಸೂಗಯ್ಯ ಹಿರೇಮಠ ಟ್ರಸ್ಟ್, ಕಲಬುರಗಿ.

2025ನೇ ಸಾಲಿನ ಪ್ರೊ. ಸುಗಯ್ಯ ಹಿರೇಮಠ ಸ್ಮರಣಾರ್ಥ ರಾಜ್ಯ ಪ್ರಶಸ್ತಿ ಪುರಸ್ಕೃತರು, ಅದು ಜಲಪುರ ತಾಲೂಕಿನ ಡಿಕ್ಸಂಗಾ ಬಿ. ಗ್ರಾಮದ ಜಾನಪದ ತಜ್ಞ ಡಾಕ್ಟರ್ ಬಸವರಾಜ ಪೊಲೀಸ ಪಾಟೀಲ ಹಾಗೂ ಮಸ್ಕಿ ತಾಲೂಕಿನ ಗುಡದೂರ ಗ್ರಾಮದ ಜಾನಪದ ಕಲಾವಿದ ಮಲ್ಲಪ್ಪ ಹುಸೇನಪ್ಪ ಅಸ್ಕಲ್ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 8 ಜನ ಸಾಧಕರಿಗೆ 2025ನೇ ಸಾಲಿನ ಸುಗಯ್ಯ ಹಿರೇಮಠ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ,ಕಲಬುರ್ಗಿಯ ಸೂಗಯ್ಯ ಹಿರೇಮಠ ಟ್ರಸ್ಟಿನ ಕಾರ್ಯದರ್ಶಿ ಡಾ. ಜಿ. ಸಿ. ನಿಂಗಣ ಸ್ವಾಗತಿಸುವರು.

# ಆಧ್ಯಾತ್ಮ ಸಾಧನೆಗೆ ಭಗವಂತನ ಸ್ಮರಣೆಗೆ ಸಮಯವಿಲ್ಲ

- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಮಾನವನ ಬದುಕು ಸಂಪತ್ತಿನಿಂದ ಕೂಡಿದ್ದರೂ ಶಾಂತಿ ಇಲ್ಲದಂತಾಗಿದೆ. ಸಿರಿ ಸಂಪದ ಗಳಿಸಲು ಉಳಿಸಲು ಮತ್ತು ಕುಡಿಯಲು ಸೇದಲು ಬೇಕಾದಷ್ಟು ಸಮಯವಿದೆ. ಆದರೆ ಅಧ್ಯಾತ್ಮ ಸಾಧನೆಗೆ ಮತ್ತು ಭಗವಂತನ ಸ್ಮರಣೆಗೆ ಮಾತ್ರ ಸಮಯ ಇಲ್ಲದಂತಾಗಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲೂಕಿನ ಮೇಹಕರ ಕಟ್ಟಿಮನಿ ಹಿರೇಮಠದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ಇಷ್ಟಲಿಂಗ ಮಹಾಪೂಜೆ ಮತ್ತು 35ನೇ ವರ್ಷದ ಪೀಠಾರೋಹಣ ವರ್ಧಂತಿ ಮಹೋತ್ಸವ, ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಭೌತಿಕ ಜೀವನ ಸಮೃದ್ಧಗೊಂಡರೆ ಸಾಲದು. ಅಂತರಿಕ ಜೀವನ ಪರಿಶುದ್ಧಗೊಳ್ಳಬೇಕಾಗಿದೆ. ಸತ್ಯ ಸುಂದರ ಸಂಸ್ಕೃತಿಯ ಅರಿವಿನಿಂದ ಮನುಷ್ಯನ ಬದುಕು ಬಲಗೊಳ್ಳಬೇಕು. ಸಕಲ ಜೀವಾತ್ಮರಿಗೂ ಒಳಿತನ್ನು ಬಯಸಿದ ವೀರಶೈವ ಧರ್ಮ ಉಗಮ, ಉತ್ಥಾನ, ಪುನರುತ್ಥಾನ ಮತ್ತು ಜಾಗೃತಿ ಎಂದು ನಾಲ್ಕು ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಮರೆಯಬಾರದು. ಮಾನವೀಯ ಸಂಬಂಧಗಳನ್ನು ಬೆಳೆಸುವ ಶಕ್ತಿ ಧರ್ಮಕ್ಕಿದೆ ಹೊರತು ಬೇರಾವುದಕ್ಕೂ ಇಲ್ಲವೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ.

ಪೀಠಾರೋಹಣದ 34 ಸಂವತ್ಸರ ಕಳೆದು ಇಂದು 35ನೇ ವರ್ಷದಲ್ಲಿ ಪಾದಾರ್ಪಣೆ ಮಾಡಿ ಮುನ್ನಡೆಯುತ್ತಿರುವುದು ಪೂರ್ವಾಚಾರ್ಯರ ಕೃಪಾ ಕಾರುಣ್ಯ ಕಾರಣವೆಂದರೆ ತಪ್ಪಾಗದು.

ಹಲವಾರು ರಚನಾತ್ಮಕ ಮತ್ತು ಗುಣಾತ್ಮಕ ಕಾರ್ಯಗಳನ್ನು ಕೈಗೊಂಡಿರುವುದು ತಮಗೆ ತೃಪ್ತಿ ತಂದಿದೆ ಎಂದ ಜಗದ್ಗುರುಗಳು ಭವಿಷ್ಯತ್ತಿನ ದಿನಗಳಲ್ಲಿ ನರನಾಡಿಗಳಲ್ಲಿ ಶಕ್ತಿ ಇರುವ ತನಕ ಧರ್ಮ-ಸಂಸ್ಕೃತಿ ಮತ್ತು ಪರಂಪರೆಯ ಸಂವರ್ಧನೆಗಾಗಿ ಶ್ರಮಿಸುತ್ತೇವೆ ಎಂದರು.

ನೇತೃತ್ವ ವಹಿಸಿದ ಮೇಹಕರ ಹಿರೇಮಠದ ರಾಜೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಬೆಂಕಿಯಲ್ಲಿ ಸುಡುತ್ತಿದ್ದರೂ ಚಿನ್ನ ಕಪ್ಪಾಗದೇ ಹೊಳೆಯುತ್ತದೆ. ಸಜ್ಜನರ ಸತ್ಪುರುಷರ ಬಾಳು ಸಹ ಹಾಗೆಯೇ. ಒಳ್ಳೆಯವರನ್ನು ನಿಂದಿಸುವವರು ಆಗಸಕ್ಕೆ ಉಗುಳಿದಂತೆ ನಿಷ್ಫಲವಾಗುತ್ತದೆ.



ಅರ್ಥವಿಲ್ಲದ ಬದುಕು ಆಚರಣೆ ಇಲ್ಲದ ಜೀವನ, ಹೃದಯ ಸಾಮರಸ್ಯ ಇಲ್ಲದ ನಡೆ ಮನುಷ್ಯನಲ್ಲಿ ಇರಬಾರದು. ಶ್ರೀ ರಂಭಾಪುರಿ ಜಗದ್ಗುರುಗಳು ಭಾವ ಶ್ರೀಮಂತಿಕೆ ಹೊಂದಿ ಧರ್ಮ ಸಂಸ್ಕೃತಿಯ ಪುನರುತ್ಥಾನಕ್ಕೆ ಸದಾ ಶ್ರಮಿಸುತ್ತಾ ಬಂದಿದ್ದಾರೆ. ಅವರ ಪೀಠಾರೋಹಣದ 35ನೇ ವರ್ಷದ ವರ್ಧಂತಿ ಮಹೋತ್ಸವ ಮೇಹಕರ ಹಿರೇಮಠದಲ್ಲಿ ಜರುಗುತ್ತಿರುವುದು ಭಕ್ತರ ಸೌಭಾಗ್ಯವೆಂದರೆ ತಪ್ಪಾಗದು. ಅವರ ಪೀಠಾರೋಹಣದ ಸುವರ್ಣ ಮಹೋತ್ಸವ ಮತ್ತು ಜನ್ಮ ಶತಮಾನೋತ್ಸವ ಆಚರಿಸುವ ಸೇವಾ ಭಾಗ್ಯ ಭಕ್ತರಿಗೆ ಬರುವಂತಾಗಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಿದರು.

ಹುಡುಗಿ ಹಿರೇಮಠದ ವಿರೂಪಾಕ್ಷಲಿಂಗ ಶಿವಾಚಾರ್ಯ ಸ್ವಾಮಿಗಳು ಜ್ಯೋತಿ ಬೆಳಗಿಸಿ ಧರ್ಮ ಸಮಾರಂಭ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀನಿವಾಸ ಸರಡಗಿಯ ರೇವಣಸಿದ್ದೇಶ್ವರ ಶಿವಾಚಾರ್ಯರು, ಸ್ಟೇಷನ್ ಬಬಲಾದ ಶಿವಮೂರ್ತಿ ಶಿವಾಚಾರ್ಯರು,

ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯರು, ಚಳಗೇರಿ ವೀರಸಂಗಮೇಶ್ವರ ಶಿವಾಚಾರ್ಯರು, ಹಲಬುರ್ಗಾ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಮಾದನ ಹಿಪ್ಪರಗಿ ಶಾಂತವೀರ ಶಿವಾಚಾರ್ಯರು, ಆಲಮೇಲ ಚಂದ್ರಶೇಖರ ಶಿವಾಚಾರ್ಯರು, ಮಳಲಿಮಠದ ಡಾ. ಗುರುನಾಗಭೂಷಣ ಶಿವಾಚಾರ್ಯರು, ಕನ್ನೂರು-ಸಿಂಧನೂರು ಸೋಮನಾಥ ಶಿವಾಚಾರ್ಯರು, ಸಂಗೊಳ್ಳಿ ಗುರುಲಿಂಗ ಶಿವಾಚಾರ್ಯರು, ಗೋರ್ಟಾ ರೇವಣಸಿದ್ದಯ್ಯ ಸೇರಿದಂತೆ ಹಲವರು ಇದ್ದರು.

ಪ್ರಶಸ್ತಿ ಪ್ರದಾನ:

ಬೀದರ್ ನಗರದ ಬಿ.ಎಸ್. ಕುದುರೆ ಇವರಿಗೆ ಸಹಕಾರಿ ರತ್ನ ಪ್ರಶಸ್ತಿ, ಗಣಪತರಾವ್ ಖೂಬಾ ಇವರಿಗೆ ಸಾಧನಾ ಸಹ್ಯಾದ್ರಿ ಪ್ರಶಸ್ತಿ, ಶಿವಶರಣಪ್ಪ ವಾಲಿ ಇವರಿಗೆ ಸುದ್ದಿ ಸುಧಾಕರ ಪ್ರಶಸ್ತಿ, ಜಮೀರಾಬಾದನ ಅಲ್ಲಾಡಿ ವೀರೇಶಂ ಇವರಿಗೆ ದಾನ ವಿಶಾರದ ಪ್ರಶಸ್ತಿ, ಕಲಬುರ್ಗಿ ಶಿವಶರಣಪ್ಪ

ಸಿರಿ ಇವರಿಗೆ ಗುರುಭಕ್ತಿ ಶಿರೋಮಣಿ ಪ್ರಶಸ್ತಿ ಪ್ರದಾನ ಮಾಡಿ ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವದಿಸಿದರು.

ಬಸವಕಲ್ಯಾಣದ ರಾಜಶ್ರೀ ದಿಲೀಪಸ್ವಾಮಿ ಭಕ್ತಿ ಗೀತೆ ಹಾಡಿದರು. ತ್ರಿಪುರಾಂತಕಗವಿಮಠದ ಡಾ.ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಸ್ವಾಗತಿಸಿದರು. ಮೆಹಕರ ಸಿದ್ಧವೀರಸ್ವಾಮಿ ರೇವಣಸಿದ್ದಯ್ಯ ಹಿರೇಮಠ ಹಾಗೂ ಬಸವಕಲ್ಯಾಣದ ರಮೇಶ ರಾಜೋಳೆ ನಿರೂಪಿಸಿದರು.

ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ ಶ್ರೀ ರಂಭಾಪುರಿ ಜಗದ್ಗುರುಗಳವರ ಪೀಠಾರೋಹಣದ ವರ್ಧಂತಿ ನಿಮಿತ್ಯ ಮಂಗಲ ಸ್ನಾನ ಪೂರೈಸಿ ಇಷ್ಟಲಿಂಗ ಮಹಾಪೂಜಾ ನೆರವೇರಿಸಿದರು.

ನಂತರ ಗ್ರಾಮದ ಹನುಮಾನ್ ದೇವಸ್ಥಾನದಿಂದ ಮೇಹಕರ ಹಿರೇಮಠದ ವರೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಬೆಳ್ಳಿ ಅಡ್ಡಪಲ್ಲಕ್ಕಿ ಮಹೋತ್ಸವ

ಸಂಭ್ರಮದಿಂದ ಜರುಗಿತು. ಕುಂಭ ಹೊತ್ತ ಮಹಿಳೆಯರು ಆರತಿ ಹಿಡಿದ ಸುಮಂಗಲೆಯರು, ಮಹಿಳಾ ಭಜನಾ ಮಂಡಳಿ ಇನ್ನಿತರ ಕಲಾ ತಂಡಗಳು ಪಾಲ್ಗೊಂಡು ಉತ್ಸವಕ್ಕೆ ಮೆರಗು ತಂದರು.

## ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಫ್ರಾನ್ಸಿಸ್.ಬಿ ಹೇಳಿಕೆ

# ಮಕ್ಕಳಲ್ಲಿನ ಪ್ರತಿಭೆ ಹೊರಹಾಕಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆ

- **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದು ಸಂತ ಜಾನರ ವಿದ್ಯಾಸಂಸ್ಥೆಯ ವ್ಯವಸ್ಥಾಪಕರು ಹಾಗೂ ಪತ್ರ ವ್ಯವಹಾರಾಧಿಕಾರಿ ಫಾದರ್ ಫ್ರಾನ್ಸಿಸ್.ಬಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕೋಟೆ ಪ್ರದೇಶದಲ್ಲಿರುವ ಸಂತಜಾನ್ ಪ್ರೌಢಶಾಲೆ ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ 2025-26ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಶಾಲೆಗೆ ಬಂದಾಗ ಅವರ ಪ್ರತಿಭೆಗಳನ್ನು ಗುರುತಿಸುವವರೇ ಶಿಕ್ಷಕರು. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ನಮ್ಮ ಶಾಲೆಯಲ್ಲಿ ಆಯೋಜಿಸಿರುವುದು ಸಂತಸದ ವಿಷಯವಾಗಿದೆ ಎಂದರು.

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದ ನೋಡೆಲ್ ಅಧಿಕಾರಿ ಹಾಗೂ ವಿದ್ಯಾಧಿಕಾರಿ ಲಕ್ಷ್ಮಿ ದೇವಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರು ಮಕ್ಕಳಲ್ಲಿ ಅಡಕವಾಗಿರುವ ಕಲೆಗಳನ್ನು ಪ್ರೋತ್ಸಾಹಿಸಬೇಕು. ಪ್ರತಿಭಾ ಕಾರಂಜಿ ಕಾರ್ಯಕ್ರಮದ ಸದುಪಯೋಗವನ್ನು ಮಕ್ಕಳು ಪಡೆದುಕೊಳ್ಳಬೇಕು ಎಂದರು.

ಬಳ್ಳಾರಿ ಪೂರ್ವ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಕಸ್ತೂರಿ ಅವರು ಮಾತನಾಡಿ, ಒಂದು ಮಗುವಿನಲ್ಲಿನ ಕಲೆ ಹಾಗೂ ಪತ್ರಿಭೆ ಬಾಲ್ಯದಲ್ಲಿಯೇ ಬಿಂಬಿತಗೊಳ್ಳುತ್ತವೆ. ಅವುಗಳನ್ನು ಪ್ರದರ್ಶಿಸಲು ಉತ್ತಮ ವೇದಿಕೆ ಮತ್ತು ಗುರುತಿಸುವ ಪೋಷಕರು, ಶಿಕ್ಷಕರು ಮುಖ್ಯವಾಗುತ್ತಾರೆ ಎಂದು ಹೇಳಿದರು.

ಜಿಲ್ಲಾದೈಹಿಕ ಶಿಕ್ಷಣಾಧಿಕಾರಿ ಕೊಟ್ರೇಶ್ ಅವರು ಪ್ರಸ್ತಾವಿಕವಾಗಿ ಮಾತನಾಡಿ, ಮಕ್ಕಳು ಕೇವಲ ಆಟ-ಪಾಠಕ್ಕೆ ಸೀಮಿತರಾಗಬಾರದು; ಬದಲಾಗಿ ತಮ್ಮಲ್ಲಿನ ಸೂಕ್ತ ಪ್ರತಿಭೆಯನ್ನು ಸಹ ಹೊರಹಾಕಬೇಕು. ಮಕ್ಕಳಲ್ಲಿರುವ ಪ್ರತಿಭೆಯನ್ನು ನಾವು ಊಹಿಸಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ಪ್ರತಿಭಾ ಕಾರಂಜಿ ಕಾರ್ಯಕ್ರಮದಿಂದ ಮಕ್ಕಳ ಪ್ರತಿಭೆಗಳ ಅನಾವರಣ ಸಾಧ್ಯವಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಿಂಗಪ್ಪ ಅವರು ಮಾತನಾಡಿ, ಶಾಲಾ ಮಕ್ಕಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುವ ಕೆಲಸ ಶಿಕ್ಷಕರು ಮಾಡಬೇಕು. ಪಾಠದ ಜತೆಗೆ ಕಲೆ ಮತ್ತು ಸಂಸ್ಕೃತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಿಳಿಸುವ ಕೆಲಸ ಮಾಡಬೇಕು ಎಂದರು.

ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಗೆ ನಿಯೋಜಿತರಾದ ತೀರ್ಪುಗಾರರರು ಅತ್ಯಂತ ನಿಷ್ಪಕ್ಷಪಾತವಾಗಿ ಪ್ರತಿಭಾವಂತರನ್ನು ಆಯ್ಕೆ ಮಾಡಬೇಕು. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಆಯ್ಕೆಯಾದ ಪ್ರತಿಭೆಗಳು



ರಾಜ್ಯಮಟ್ಟದಲ್ಲಿ ನಡೆಯುವ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ನಮ್ಮ ಜಿಲ್ಲೆಯ ಹೆಚ್ಚಿನ ಮಕ್ಕಳು ರಾಜ್ಯಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಮಿಂಚಿ, ಹೆಚ್ಚಿನ ಪ್ರಶಸ್ತಿಗಳನ್ನು ತರುವುದರ ಮೂಲಕ ಜಿಲ್ಲೆಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಮಟ್ಟದಲ್ಲಿ ಶಾಲಾ ಮತ್ತು ಪ್ರೌಢ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ವಿವಿಧ ರೀತಿಯ ಸ್ಪರ್ಧೆಗಳ ವೈಯಕ್ತಿಕ ಹಾಗೂ ಸಾಮೂಹಿಕ ವಿಭಾಗಗಳಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಈ ಸಂದರ್ಭದಲ್ಲಿ ಸಂತಜಾನರ ಪ್ರೌಢಶಾಲೆಯ ಮುಖ್ಯಗುರುಗಳಾದ ಶಾಂತುಶೀಲನ್, ಜಿಲ್ಲಾ ವಸ್ತು ವಿಷಯ ಪರಿವೀಕ್ಷಕರಾದ ವೇದಾವತಿ, ಜಿಲ್ಲಾ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಭಾಸ್ಕರ ರೆಡ್ಡಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಬಳ್ಳಾರಿ ಪೂರ್ವ ವಲಯದ ಕ್ಷೇತ್ರ ಸಮನ್ವಯಾಧಿಕಾರಿ ವಿರೇಶಪ್ಪ, ಜಿಲ್ಲಾ ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಸತ್ಯನಾರಾಯಣ ಸೇರಿದಂತೆ ಡಯಟ್ ಉಪನ್ಯಾಸಕರು, ವಿಷಯ ಪರಿವೀಕ್ಷಕರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸರ್ಕಾರಿ, ಅನುದಾನ ರಹಿತ ಶಾಲೆಗಳ ಮುಖ್ಯ ಗುರುಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು, ಇತರರು ಉಪಸ್ಥಿತರಿದ್ದರು.

# ಅಧಿಕಾರಿಗೆ ಗುತ್ತಿಗೆದಾರನಿಂದ ಧಮ್ಕಿ

- **ಮಲ್ಲಮ್ಮ ಪೀಣ್ಯ ದಾಸರಹಳ್ಳಿ:**

ಬಾಗಲಗುಂಟೆ ಜಿಬಿಎ ಕಛೇರಿಗೆ ನುಗ್ಗಿ ನಂದೀಶ ಎಂಬ ಗುತ್ತಿಗೆದಾರ ಇಇ ಅಧಿಕಾರಿ ಸಂಗೀತಾ ಮುಂದೆ ದರ್ಪ ತೋರಿದ್ದಲ್ಲದೆ, ಏಕವಚನದಲ್ಲಿ ನಿಂದನೆ ಕೂಡಾ ಮಾಡಿದ್ದಾನೆ ಎಂಬ ದೂರು ಕೇಳಿಬಂದಿದೆ.

ಸರ್ಕಾರಿ ಅಧಿಕಾರಿಗಳಿಗೆ ಗುತ್ತಿಗೆದಾರಿರಿಂದ ಕಿರುಕುಳ ಆರೋಪ ಅಲ್ಲದೆ ಟೆಂಡರ್ ವಿಚಾರವಾಗಿ ಕಿರಿಕಿರಿ ಮಾಡಿರುವ ಗುತ್ತಿಗೆದಾರ ನಂದೀಶ್ ಎಂಬುವರು ಬಿಬಿಎಂಪಿ ಕಛೇರಿ ಒಳಗೆ ಅಧಿಕಾರಿಯ ಮುಂದೆ ದಾಖಲೆ ಹರಿದು ದರ್ಪ ತೋರಿದ್ದಾರೆ.

ಅಧಿಕಾರಿ ಅಂತಲೂ ನೋಡದೆ ಬಾಯಿಗೆ ಬಂದಂತೆ ನಿಂದನೆ ಮಾಡಿದ್ದಾರೆ. ಜಿಬಿಎ ಕಛೇರಿಯಲ್ಲಿ ಅಧಿಕಾರಿಗಳ ಮೇಲೆ ಗುತ್ತಿಗೆದಾರರ ಕಿರುಕುಳ ಹೆಚ್ಚಾಗಿದೆ. ಅದರಲ್ಲೂ ಟೆಂಡರ್ ವಿಚಾರವಾಗಿ ನಿರಂತರ ಕಿರುಕುಳ ನೀಡ್ತಿದ್ದು ಕೆಲಸ ಮಾಡಲು ಬಿಡದೆ ಧಮ್ಕಿ ಹಾಕುತ್ತಿದ್ದಾರೆ ಎನ್ನಲಾಗಿದೆ.

ಸರ್ಕಾರದಿಂದ ಸಿಎಂಐಡಿಪಿ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗೆ ಟೆಂಡರ್ ಕರೆಯಲಾಗಿತ್ತು. ಇದಕ್ಕೆ ಗುತ್ತಿಗೆದಾರರು ನಮ್ಮ ದಾಖಲೆಗಳನ್ನ ಮೂವ್ ಮಾಡಿ ಎಂದು ಸಂಗೀತಾ ಅವರಿಗೆ ಬಾಯಿಗೆ ಬಂದ ಹಾಗೆ ಬೈದಿದ್ದಾರೆ.

ಘಟನೆ ಸಂಬಂಧ ಸಂಗೀತಾ ಈ ರೀತಿ ನಿಂದನೆ ಹಾಗೂ ಕೆಲಸ ಮಾಡದೇ ಬಿಡದೆ ಧಮ್ಕಿ ಹಾಕುವವರ ವಿರುದ್ಧ ದೂರು ನೀಡಿದ್ದೇನೆ. ಅವರನ್ನು ಕರೆಸಿ ಎಚ್ಚರಿಕೆ ನೀಡಿ ಎಂದು ಹೇಳಿದ್ದಾರೆ. ನಂದೀಶ್ ಗೆ ವಿಚಾರಣೆಗೆ ಬರುವಂತೆ ಬಾಗಲಗುಂಟೆ ಪೊಲೀಸರು ನೋಟಿಸ್ ನೀಡಿದರೂ ಕೂಡ ಗೈರಾಗಿದ್ದರು.

ಹಿಗಾಗಿ ಎಂಜಿನಿಯರ್ ಸಂಗೀತ ಠಾಣೆಗೆ ಹಾಜರಾಗಿ ಹೇಳಿಕೆ ನೀಡಿ ತೆರಳಿದ್ದಾರೆ. ವಿಚಾರಣೆ ಮುಂದುವರೆದಿದೆ.

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

# ಕರುನಾಡಿನಲ್ಲಿ ನೆಮ್ಮದಿಯ ಗ್ಯಾರಂಟಿ



## ಹಸಿವು ನೀಗಿಸುವ ಕೈಗಳಿಗೆ ಭರವಸೆಯ ವಾಗ್ದಾನ



- ಕೃಷಿ ಸಂಸ್ಕರಣೆ, ರಿಯಾಯಿತಿ ದರದಲ್ಲಿ ಜೈವಿಕ ಕೀಟ ನಾಶಕ ವಿತರಣೆ, ಹಸಿರೆಲೆ ಗೊಬ್ಬರ, ಸಿರಿಧಾನ್ಯ ಬೆಳೆಯಲು ಪ್ರೋತ್ಸಾಹ ಮತ್ತು ಸಕಾಲದಲ್ಲಿ **ಬೆಂಬಲ ಬೆಲೆ ಖರೀದಿ ಕೇಂದ್ರಗಳ ಸ್ಥಾಪನೆ**ಯಂತಹ ಅನೇಕ ಕಾರ್ಯಕ್ರಮಗಳು ರೈತರ ಮನೋಬಲ ಹೆಚ್ಚಿಸಿದೆ.
- ಬೀಜೋತ್ಪಾದನೆ, ರೈತ ಸಂಪರ್ಕ, ಕೃಷಿ ತರಬೇತಿ ಹಾಗೂ ಜೈವಿಕ ಪ್ರಯೋಗಾಲಯವನ್ನು ಒಂದೇ ಸೂರಿನಡಿ ತರಲು **ರಾಜ್ಯ ಕೃಷಿ ಅಭಿವೃದ್ಧಿ ಏಜೆನ್ಸಿ** ಸ್ಥಾಪನೆ
- ಪ್ರತಿ ಟನ್ **ಕಬ್ಬಿಗೆ ₹. 3,300** ದರ ನಿಗದಿ
- ಹಿಂದಿನ ಸರ್ಕಾರದ ಅವಧಿಯಲ್ಲಿ ಕೈಗೊಂಡಿದ್ದ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹಾಗೂ ಇತರೆ ಗ್ರಾಮಗಳ **ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಲು** ನಿರ್ಧಾರ
- ಕ್ಯಾಲನೂರು, ಚಿಂತಾಮಣಿ ಮತ್ತು ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ **ಇ - ಹರಾಜು ಪದ್ಧತಿ** ಅಳವಡಿಕೆ
- ರಾಜ್ಯದಲ್ಲಿ ಹಿಂದಿನ ಸರ್ಕಾರ ಸ್ಥಗಿತಗೊಳಿಸಿದ್ದ **ಕೃಷಿ ಭಾಗ್ಯ ಯೋಜನೆ** ಪುನರಾರಂಭ
- ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ರೈತರಿಂದ ಸ್ವಾಧೀನಪಡಿಸಿಕೊಳ್ಳುವ ನೀರಾವರಿ ಜಮೀನಿಗೆ ಎಕರೆಯೊಂದಕ್ಕೆ **₹. 40 ಲಕ್ಷ**, ಖುಷ್ಕಿ ಒಣಭೂಮಿಯ ಎಕರೆಯೊಂದಕ್ಕೆ **₹. 30 ಲಕ್ಷ** ಪರಿಹಾರ
- ರೈತರ ಪಂಪ್ ಸೆಟ್ ಗಳಿಗೆ ವಿದ್ಯುತ್ ಉದ್ದೇಶಕ್ಕಾಗಿ ವರ್ಷಕ್ಕೆ ನಮ್ಮ ಸರ್ಕಾರ **₹. 19,000 ಕೋಟಿ** ಸಬ್ಸಿಡಿ ನೀಡುತ್ತಿದೆ. ಕೃಷಿ ನೀರಾವರಿ ಯೋಜನೆಗಳಿಗೆ **₹. 26,000 ಕೋಟಿ** ನೀಡಿದೆ.
- ರಾಜ್ಯದ ಸಾವಯವ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡಲು ರಾಜ್ಯದ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 **ಪ್ರಾಂತೀಯ ಸಾವಯವ ಒಕ್ಕೂಟ**ಗಳ ರಚನೆ
- ಸಾವಯವ ಹಾಗೂ ಸಿರಿಧಾನ್ಯಗಳ ಕೃಷಿಗೆ ಸಂಬಂಧಿಸಿದ ಸಂಶೋಧನಾ ಕೇಂದ್ರಗಳು ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪನೆ
- **ಕಲಬುರಗಿಯಲ್ಲಿ ಅಗ್ರಿ - ಟೆಕ್** - ವೇಗವರ್ಧಕ ಕೇಂದ್ರಗಳ ಸ್ಥಾಪನೆಗೆ ತೀರ್ಮಾನ
- ಭಾರೀ ಮಳೆ ಮತ್ತು ಪ್ರವಾಹದಿಂದ ಬೆಳೆ ಹಾನಿಗೀಡಾಗಿರುವ **12.82 ಲಕ್ಷ ಹೆಕ್ಟೇರ್**ಗಳಷ್ಟು ಕೃಷಿ ಮತ್ತು ತೋಟಗಾರಿಕಾ ಬೆಳೆಗೆ ಹೆಚ್ಚಿನ ಪರಿಹಾರ ವಿತರಣೆಗೆ ನಿರ್ಧಾರ
- **₹. 5 ಲಕ್ಷ ಗಳವರೆಗೆ ಶೂನ್ಯ ಬಡ್ಡಿ** ರೂಪದಲ್ಲಿ ನೀಡಲಾಗುವ ಸಾಲವನ್ನು ಸಹಕಾರಿ ಕೃಷಿ ಬ್ಯಾಂಕ್ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳಿಗೆ ವಿಸ್ತರಣೆ

## ಕರ್ನಾಟಕ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ...

**ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.**

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ